ಕನ್ನಡ ಮಾತು

ಲಕ್ಷ್ಮೀನಾರಾಯಣ ಭಟ್ಟ



ಕನ್ನಡ ಮಾತು

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ನೃಪತುಂಗ ರಸ್ತೆ
ಬೆಂಗಳೂರು–೫೬೦ ೦೦೨

ಶ್ರೀ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರಿಂದ ರಚಿಸಲ್ಪಟ್ಟ 'ಕನ್ನಡ ಮಾತು' ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ (ಜನವರಿ ೧೯೮೩) ಐಬಿಎಚ್ ಪ್ರಕಾಶನದವರ ಕೃಪೆಯಿಂದ ಪ್ರಕಟಿಸಲ್ಪಟ್ಟದ್ದು.

KANNADA MAATU—a monograph on Kannada language written by N. S. Lakshminarayana Bhatta. Published by The Directorate of Kannada and Culture, Government of Karnataka, 14/3A Nrupatunga Road, Bangalore-560 002, on the occassion of the *FIRST WORLD KANNADA CONFERENCE (January 1983)* by the Courtesy of IBH Prakashana, Gandhinagar, Bangalore-560 009

ಬೆಲೆ ರೂ. ೨-೦೦

ಮುಖಪುಟ, ರೇಖಾಚಿತ್ರಗಳು : ಪ. ಸ. ಕುಮಾರ್

ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ,
ಬೆಂಗಳೂರು-೫೬೦ ೦೦೯

ಮನುಷ್ಯ ಈವರೆಗೆ ಬೇಕಾದಷ್ಟು ಹೊಸ ಹೊಸ ಸಂಗತಿಗಳನ್ನು ಸಾಧನಗಳನ್ನು ಕಂಡುಕೊಂಡಿದ್ದಾನೆ. ತನ್ನ ಸುತ್ತ ಇರುವ ಪ್ರಾಣಿಗಳನ್ನು ಪ್ರಕೃತಿಯನ್ನು ನೋಡಿ ಅವುಗಳಿಂದಲೂ ಬೇಕಾದಷ್ಟು ಕಲಿತುಕೊಂಡಿದ್ದಾನೆ. ಹಕ್ಕಿಯ ಹಾರಾಟದಿಂದ ಸ್ಫೂರ್ತಿಪಡೆದು ವಿಮಾನವನ್ನು ನಿರ್ಮಿಸಿದ್ದಾನೆ. ಮೀನಿನ ಈಜಾಟದಿಂದ ಸ್ಫೂರ್ತಿಗೊಂಡು ದೋಣಿ ಹಡಗುಗಳನ್ನು ನಿರ್ಮಿಸಿದ್ದಾನೆ. ಪ್ರಕೃತಿಯಲ್ಲಿ ದೊರೆತ ಗಾಳಿ ಬೆಳಕು ನೀರುಗಳನ್ನೇ ಬಳಸಿ ತನ್ನ ನಾಗರಿಕತೆಯನ್ನು ಬೆಳೆಸಿಕೊಂಡಿದ್ದಾನೆ. ಸಮುದ್ರದ ತಳವನ್ನು ಶೋಧಿಸಿದ್ದಾನೆ; ಚಂದ್ರಮಂಡಲದಲ್ಲಿ ಕಾಲಿಟ್ಟಿದ್ದಾನೆ. ತನ್ನ ದೇಹ ಮನಸ್ಸುಗಳನ್ನೇ ಸೂಕ್ಷ್ಮವಾಗಿ ಅಭ್ಯಾಸಮಾಡಿ ಅವುಗಳನ್ನು ರೋಗ ರುಜಿನಗಳಿಂದ ಪಾರುಮಾಡಲು ಸಾಹಸಮಾಡಿದ್ದಾನೆ. ಅವನು ತಿಳಿಯಬೇಕಾದದ್ದು ಅಪಾರವಾಗಿದೆ ನಿಜ. ಆದರೆ ತಿಳಿದಿರುವಷ್ಟು ಸಂಗತಿ ಸಾಮಾನ್ಯವಾದದ್ದೇನೂ ಅಲ್ಲ. ಮನುಷ್ಯನ ಈ ಸಾಧನೆಗಳಲ್ಲೆಲ್ಲ ಕಿರೀಟಪ್ರಾಯವಾದ ಸಾಧನೆ ಎಂದರೆ ಅವನು ಭಾಷೆಯನ್ನು ಕಂಡುಕೊಂಡದ್ದು. ಅವನು ಮಾಡಿರುವ ಅನೇಕ ಸಾಧನೆಗಳಿಗೆ ಬೆನ್ನೆಲುಬಾದ ಸಾಧನೆ ಇದು.

ಭಾಷೆ ಅಥವಾ ಮಾತು ಇಲ್ಲದೆ ಮನುಷ್ಯ ಬಾಳುವೆ ಮಾಡುವುದೇ ಕಷ್ಟ. ನಮಗೆ ಅನ್ನಿಸಿದ್ದನ್ನು ಬೇರೆಯವರಿಗೆ ಹೇಳದೆ, ಅವರಿಗೆ ಅನಿಸಿದ್ದನ್ನು ನಾವು ತಿಳಿಯದೆ ವ್ಯವಹಾರವೇ ಸಾಧ್ಯವಿಲ್ಲ. ದಿನದಿನದ ಸಣ್ಣ ಪುಟ್ಟ ವ್ಯವಹಾರದಿಂದ ಹಿಡಿದು ಪ್ರಪಂಚದ ನಾಗರಿಕತೆ ಸಂಸ್ಕೃತಿಗಳ ಬೆಳವಣಿಗೆಯವರೆಗೆ ಮಾತು ವಹಿಸಿರುವ ಪಾತ್ರ ತುಂಬ ದೊಡ್ಡದು. ಬಹಳ ಹಿಂದೆ ಇದ್ದ ದಂಡಿ ಎಂಬ ಒಬ್ಬ ವಿದ್ವಾಂಸ ಭಾಷೆಯನ್ನು ಬೆಳಕಿಗೆ ಹೋಲಿಸಿದ್ದಾನೆ. ಬೆಳಕು ಇಲ್ಲದೆ ಇದ್ದರೆ ಇಡಿಯ ಲೋಕವೇ ಹೇಗೆ ಕತ್ತಲಿನಿಂದ ತುಂಬಿಹೋಗುತ್ತಿತ್ತೋ ಹಾಗೆಯೇ ಮಾತೆನ್ನುವುದು ಇಲ್ಲದೆ ಇದ್ದಿದ್ದರೆ ಜಗತ್ತೆಲ್ಲ ಅಜ್ಞಾನದಿಂದ ತುಂಬಿ ಹೋಗುತ್ತಿತ್ತು ಎಂದು ಅವನು ಹೇಳಿದ್ದಾನೆ. ಮಾತೇ

ಜ್ಯೋತಿರ್ಲಿಂಗ ಎನ್ನುವ ನುಡಿಯನ್ನು ನೀವು ಕೇಳಿದ್ದೀರಿ ಅಲ್ಲವೆ ? ಆ ಮಾತಿನ ಅರ್ಥವೂ ಅದೇ.

ನಾವು ಕನ್ನಡ ಮಾತನಾಡುತ್ತೇವೆ. ಆದ್ದರಿಂದ ಕನ್ನಡ ಭಾಷೆ ನಮಗೆ ಚೆನ್ನಾಗಿ ಗೊತ್ತು ಎಂದು ನಮ್ಮ ಭಾವನೆ. ಆದರೆ ಕನ್ನಡ ಮಾತನಾಡುವವರಿಗೆಲ್ಲ ಕನ್ನಡ ಭಾಷೆಯ ವಿಷಯ ಗೊತ್ತು ಎಂದು ಹೇಳುವ ಹಾಗಿಲ್ಲ. ಆ ಬಗ್ಗೆ ನಮಗೆ ತಿಳಿಯದ ಸಂಗತಿಗಳು ಎಷ್ಟೋ ಇವೆ. ಕನ್ನಡ ಭಾಷೆ ಹೇಗೆ ಬಂತು ? ಅದಕ್ಕೆ ಸಂಬಂಧವಿರುವ ಬೇರೆ ಭಾಷೆಗಳು ಯಾವುವು ? ಯಾವ ಯಾವ ಭಾಷೆಯ ಪದಗಳು ಅದರಲ್ಲಿ ಸೇರಿವೆ ? ಅದರ ಎಷ್ಟೋ ಪದಗಳಿಗೆ ಹಿಂದೆ ಒಂದು ಅರ್ಥ ಇದ್ದು ಈಗ ಅದು ಬದಲಾಗಿದ್ದು ಹೇಗೆ ?–ಇಂಥ ಎಷ್ಟೋ ಸಂಗತಿಗಳು ನಮಗೆ ಗೊತ್ತಿಲ್ಲ. ಭಾಷೆಗೆ ಸಂಬಂಧಿಸಿದ ಇಂಥ ಸಂಗತಿಗಳನ್ನೆಲ್ಲ ಒಳಗೊಳ್ಳುವ ಅಧ್ಯಯನವನ್ನು ಭಾಷಾವಿಜ್ಞಾನ ಎಂದು ಕರೆಯುತ್ತಾರೆ.

ನಮ್ಮ ಮಾತಿನ ಅರ್ಥವೇ ನಮಗೆ ಪೂರ್ತಿ ಗೊತ್ತಿಲ್ಲ ಎಂದೆ ಅಲ್ಲವೆ ? ಅದಕ್ಕೆ ಒಂದು ನಿದರ್ಶನ ನೋಡೋಣ.

ಚಿನ್ನದ ಬೆಂಡೋಲೆ ಎಂಬ ಮಾತು ತೆಗೆದುಕೊಳ್ಳಿ. ನಿಮಗೆ ಗೊತ್ತಿರುವಂತೆ ಇದು ಚಿನ್ನದಿಂದ ಮಾಡಿದ ಒಂದು ಒಡವೆ. ಹೆಂಗಸರು ಇದನ್ನು ಕಿವಿಯಲ್ಲಿ ತೊಡುತ್ತಾರೆ. ನಿಜವಾಗಿ ಬೆಂಡೋಲೆ ಎಂಬ ಪದಕ್ಕೆ ಆಭರಣ ಅಥವಾ ಒಡವೆ ಎನ್ನುವ ಅರ್ಥ ಇಲ್ಲವೇ ಇಲ್ಲ. ಬೆಂಡು ಮತ್ತು ಓಲೆ ಎಂಬ ಎರಡು ಪದ ಸೇರಿ ಬೆಂಡೋಲೆ ಎಂಬ ಪದ ಆಗಿದೆ ! ಆ ಪದ ಹುಟ್ಟಿದ್ದು ಹೀಗೆ : ಬಹಳ ಹಿಂದೆ ನಮ್ಮ ದೇಶದ ಸ್ತ್ರೀಯರು ಕಿವಿ ಚುಚ್ಚಿಕೊಂಡ ಮೇಲೆ ಆ ಜಾಗದಲ್ಲಿ ಸಣ್ಣದಾಗಿ ಕೊಳವೆಯಂತೆ ಸುತ್ತಿದ ಓಲೆಪತ್ರದ ತುಂಡನ್ನು ಧರಿಸುತ್ತಿದ್ದರು, ಅದನ್ನು ಓಲೆ ಎಂದು ಕರೆಯುತ್ತಿದ್ದರು. ಬಳೆ ಕುಂಕುಮ ಹೇಗೆ ಸುಮಂಗಲಿತನದ ಗುರುತುಗಳೋ ಹಾಗೆಯೇ ಓಲೆಪತ್ರ ಸೌಭಾಗ್ಯದ ಸಂಕೇತವಾಗಿತ್ತು. ಮುಂದೆ ಅದರ ಜಾಗದಲ್ಲಿ ಹೊಳೆಹೊಳೆಯುವ ಲೋಹದ ಆಭರಣ ಹಾಕಿಕೊಳ್ಳುವ ಪರಿಪಾಟಿ ಬಂತು. ಕಿವಿ ಚುಚ್ಚಿಕೊಂಡ ಕೂಡಲೆ ಆಭರಣ ಹಾಕಿಕೊಳ್ಳಲು ಆಗುವುದಿಲ್ಲ, ನೋವಾಗುತ್ತದೆ. ಕಿವಿಯ ತೂತು ಸ್ವಲ್ಪ ಬಿಟ್ಟುಕೊಂಡ ಮೇಲೆ ತೊಂದರೆಯಿಲ್ಲದೆ ಹಾಕಿಕೊಳ್ಳಬಹುದು. ಅದಕ್ಕಾಗಿ ಕಿವಿ ಚುಚ್ಚಿದ ಕೂಡಲೆ ಆ ಜಾಗದಲ್ಲಿ ಸಣ್ಣ ಬೆಂಡಿನ ಚೂರನ್ನು ಸಿಗಿಸಿಬಿಡುತ್ತಿದ್ದರು. ಹತ್ತಾರು ದಿನ ಆ ಬೆಂಡಿನ ಮೇಲೆ ನೀರು ಬಿದ್ದು,



ಕಿವಿ ಚುಚ್ಚಿದ ಕೂಡಲೆ ಸಣ್ಣ ಬೆಂಡಿನ ಚೂರನ್ನು ಸಿಗಿಸಿಬಿಡುತ್ತಿದ್ದರು

ಬೆಂಡು ಅರಳಿ ಕಿವಿಯ ತೂತು ಕೊಂಚ ಬಿಟ್ಟುಕೊಂಡ ಮೇಲೆ ಆಭರಣ ಹಾಕಿಕೊಳ್ಳುತ್ತಿದ್ದರು. ಮೊದಲು ಕಿವಿಯಲ್ಲಿ ಓಲೆಪತ್ರ ಇಟ್ಟುಕೊಳ್ಳುತ್ತಿದ್ದಾಗ ಅದನ್ನು ಓಲೆ ಎಂದಷ್ಟೇ ಕರೆಯುತ್ತಿದ್ದರು. ಬೆಂಡು ಇಟ್ಟುಕೊಂಡ ಮೇಲೆ ಅದು ಬೆಂಡೋಲೆ ಆಯಿತು. ಚಿನ್ನದ ಅಥವಾ ವಜ್ರದ ಆಭರಣ ಇಟ್ಟುಕೊಂಡಾಗ ಚಿನ್ನದ ಬೆಂಡೋಲೆ ಅಥವಾ ವಜ್ರದ ಬೆಂಡೋಲೆ ಆಯಿತು. ಈಗ ಕಿವಿಗೆ ಹಾಕಿಕೊಳ್ಳುವ ಲೋಹದ ಬೆಂಡೋಲೆಯಲ್ಲಿ ಬೆಂಡು, ಓಲೆ ಯಾವುದೂ ಇಲ್ಲ. ಆದರೂ ಅದಕ್ಕೆ ಬೆಂಡೋಲೆ ಎಂಬ ಹೆಸರೇ ನಿಂತಿದೆ.

ಇನ್ನೊಂದು ನಿದರ್ಶನ ನೋಡೋಣ, 'ಇಲಿ ಸತ್ತು ನಾತ ಹೊಡೀತಿದೆ' ಅಂತ ಯಾರೋ ಹೇಳಿದರು ಅನ್ನಿ. ಆ ಮಾತಿಗೆ ಏನು ಅರ್ಥ ಅಂತ

ನಿಮಗೆ ಚೆನ್ನಾಗಿ ಗೊತ್ತು. ಇಲಿ ಸತ್ತು ಹೋಗಿರುವುದರಿಂದ ಕೆಟ್ಟವಾಸನೆ ಬರುತ್ತಿದೆ ಅಂತ ತಾನೆ? ನಾತ ಅಂದರೆ ಕೆಟ್ಟವಾಸನೆ ಅಲ್ಲ, ಪರಿಮಳ ಅಂತ ಯಾರಾದರೂ ಹೇಳಿದರೆ ಬಹುಶಃ ನೀವು ನಕ್ಕುಬಿಡುತ್ತೀರಿ. ಹೀಗೆ ಹೇಳಿದ ವ್ಯಕ್ತಿ ಶುದ್ಧ ಪೆದ್ದ ಅಂದುಕೊಳುತ್ತೀರಿ. ಆದರೆ 'ನಾತ' ಎನ್ನುವ ಶಬ್ದಕ್ಕೆ ಮೊದಲು ಇದ್ದ ಅರ್ಥ ಪರಿಮಳ, ಸುವಾಸನೆ ಅಂತಲೇ. ನಮ್ಮ ಕವಿಗಳು ಬಳಸಿರುವ ನರುಗಂಪು, ನರುದಂಬುಲ ಮೊದಲಾದ ಮಾತನ್ನೆಲ್ಲ ನೀವು ಕೇಳಿದ್ದೀರಿ, ಮಲ್ಲಿಗೆ ಗುಲಾಬಿಯಂಥ ಹೂವುಗಳ ಸುವಾಸನೆಯನ್ನು ಬಣ್ಣಿಸುವಾಗ ನರುಗಂಪು ಎಂಬ ಪದ ಬಳಕೆಯಾಗಿದೆ. ನರುದಂಬುಲ ಎಂದರೆ ಪರಿಮಳಿಸುವ ತಾಂಬೂಲ. ಅಡಕೆ ಸುಣ್ಣಗಳ ಜೊತೆಗೆ ಪಚ್ಚ ಕರ್ಪೂರ ಮೊದಲಾದ ತಕ್ಕ ಪರಿಮಳ ದ್ರವ್ಯಗಳನ್ನು ಸೇರಿಸಿ ಕಟ್ಟಿದ ತಾಂಬೂಲವೇ ನರುದಂಬುಲ. ನರು ಎನ್ನುವ ಶಬ್ದ ನಾರು ಎಂಬ ಶಬ್ದ ದಿಂದ ಬಂದಿದೆ. ಹಿಂದೆ ನಾರು ಎಂದರೆ ಘಮಘಮಿಸು ಎಂಬ ಅರ್ಥ ಇತ್ತು. ಕೆಟ್ಟವಾಸನೆ ಎಂಬ ಅರ್ಥ ಬಂದದ್ದು ಈಚೆಗೆ. ಹೀಗೆ ಒಂದು ಪದದ ಅರ್ಥ ತದ್ವಿರುದ್ಧ ಎನ್ನುವಷ್ಟು ಬದಲಾಗಿದೆ. (ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲೀನೋ ನಾರು ಎನ್ನುವ ಪದವನ್ನು ಈಗಲೂ ಸುವಾಸನೆ ಕೊಡು ಎಂಬ ಅರ್ಥದಲ್ಲೇ ಬಳಸುವುದುಂಟು.

ಮತ್ತೊಂದು ಒಂದು ನಿದರ್ಶನ ನೋಡಿ. ತಂಗಳನ್ನ ಎನ್ನುವ ಮಾತನ್ನು ನಾವು ದಿನದಿನದ ಮಾತಿನಲ್ಲಿ ಬಳಸುತ್ತೇವೆ. ಅದಕ್ಕೆ ತಣಿದ ಅನ್ನ ಅಂತ ಅರ್ಥ. ನಿಜವಾಗಿ ತಂಗಳನ್ನ ಎನ್ನುವ ಪದಕ್ಕೆ ನಾವು ಇಟ್ಟುಕೊಂಡಿರುವ ಅರ್ಥ ತಂಗಳು ಎಂಬ ಪದದಲ್ಲೇ ಇದೆ. ತಣ್+ಕೂಳ್ (ತಣಿದ ಅನ್ನ) ಎಂಬ ಮಾತೇ ತಂಗೂಳ್, ತಂಗುಳ್, ತಂಗುಳು ಆಗಿ ಈಗ ತಂಗಳು ಆಗಿದೆ. ತಂಗಳು ಎಂದರೇ ತಣಿದ ಅನ್ನ ಎಂದು ಅರ್ಥ. ನಾವು ಈ ಪದಕ್ಕೆ ಸಾರು, ಹುಳಿ ಎಲ್ಲ ಸೇರಿಸಿ ತಂಗಳು ಸಾರು ತಂಗಳು ಹುಳಿ ಅಂತೆಲ್ಲ ಬಳಸುತ್ತೇವೆ. ಅಷ್ಟೇ ಅಲ್ಲ 'ಅನ್ನ' ಎನ್ನುವ ಅರ್ಥ 'ತಂಗಳಿ'ನಲ್ಲೇ ಇದ್ದರೂ ಅದಕ್ಕೆ ಪುನಃ ಅನ್ನ ಎಂಬ ಪದ ಸೇರಿಸಿ ತಂಗಳನ್ನ (ತಣಿದ+ಅನ್ನ+ಅನ್ನ) ಎಂದು ಹೇಳುತ್ತೇವೆ.

ಹೀಗೆಯೇ ಅಮ್ಮ ಎಂದರೆ ಅಪ್ಪ; ಮಾಣಿ ಎಂದರೆ ಬ್ರಹ್ಮಚಾರಿ (ಲೋಟ ತೊಳೆಯುವವ ಅಲ್ಲ) ಅಂತೆಲ್ಲ ಹೇಳಿದರೆ ನೀವು ತಬ್ಬಿಬ್ಬಾಗ

ಬಹುದು. ನಾವು ಆಡುತ್ತಿರುವ ಭಾಷೆಯ ವಿಷಯವೇ ನಮಗೆ ಗೊತ್ತಿಲ್ಲ ಅನ್ನಿಸೀತು. ಈಗ ನಮ್ಮ ಭಾಷೆಯ ಬಗ್ಗೆ ಕೆಲವು ಸಂಗತಿಗಳನ್ನು ತಿಳಿದುಕೊಳ್ಳೋಣ. ಅದಕ್ಕೆ ಮುಂಚೆ ಎಲ್ಲ ಭಾಷೆಗಳಿಗೂ ಸಂಬಂಧಿಸುವ ಕೆಲವು ವಿಚಾರಗಳನ್ನು ತಿಳಿಯುವುದು ಅಗತ್ಯ.

ಎಷ್ಟೋ ಜನ ಒಂದು ವಿಷಯ ತಪ್ಪಾಗಿ ತಿಳಿದಿದ್ದಾರೆ. ಮನುಷ್ಯನಿಗೆ ಹುಟ್ಟಿದಾಗಿನಿಂದಲೇ ಸಹಜವಾಗಿ ಮಾತು ಬರುತ್ತದೆ ಎಂದು ಅವರ ಭಾವನೆ. ಮನುಷ್ಯನಿಗೆ ಕಿವಿ ಕಣ್ಣು ಮೂಗು ಬಾಯಿ ಎಲ್ಲ ಇದೆ ತಾನೆ? ಕಿವಿ ಇರುವುದು ಕೇಳುವುದಕ್ಕೆ ; ಕಣ್ಣಿರುವುದು ನೋಡುವುದಕ್ಕೆ ; ಮೂಗು ಇರುವುದು ಉಸಿರಾಡುವುದಕ್ಕೆ; ಹಾಗೆಯೇ ಬಾಯಿ ಇರುವುದು ಮಾತನಾಡುವುದಕ್ಕೆ ಅಂತ ಅನೇಕರ ತಿಳಿವಳಿಕೆ. ಆದರೆ ಇದು ನಿಜವಲ್ಲ. ಕೇಳುವುದು, ನೋಡುವುದು, ಉಸಿರಾಡುವುದು ಮನುಷ್ಯನಿಗೆ (ಕಲಿಯದೆ) ತಾನಾಗಿಯೇ ಬರುತ್ತದೆ. ಆದರೆ ಮಾತನಾಡುವುದು ಮಾತ್ರ ಕಲಿತಲ್ಲದೆ ಬರುವುದಿಲ್ಲ. ಬಾಯಿ ಇರುವುದು ಆಹಾರವನ್ನು ತಿನ್ನುವುದಕ್ಕೆ ಅಷ್ಟೆ; ಆದರೆ ಮನುಷ್ಯ ಅದನ್ನು ಮಾತನಾಡಲೂ ಬಳಸುತ್ತಾನೆ.

ಭಾಷೆಯನ್ನು ಸೃಷ್ಟಿಸಿದವನು ದೇವರು. ಅವನಿಂದ ಅದು ಸಹಜವಾಗಿಯೇ ಮನುಷ್ಯನಿಗೆ ಬಂತು-ಎಂಬ ಒಂದು ನಂಬಿಕೆ ಹಿಂದೆ ಜನರಲ್ಲಿತ್ತು. ಇದು ನಿಜವೋ ಸುಳ್ಳೋ ಎಂದು ಪರೀಕ್ಷಿಸಲು ಅನೇಕ ಪ್ರಯೋಗಗಳೂ ನಡೆದದ್ದುಂಟು. ಅಂಥ ಒಂದು ಪ್ರಯೋಗ ನಮ್ಮ ದೇಶದಲ್ಲಿಯೇ ನಡೆಯಿತು. ಅಕ್ಬರ್ ಚಕ್ರವರ್ತಿ ಒಮ್ಮೆ ಎರಡು ಮಕ್ಕಳನ್ನು ಅವು ಹುಟ್ಟಿದ ಗಳಿಗೆಯಿಂದಲೇ ಬೇರೆಯಾಗಿ ಇಟ್ಟುಬಿಟ್ಟ. ಅವುಗಳಿಗೆ ಜನರ ಸಂಪರ್ಕವೇ ಇರಲಿಲ್ಲ. ಹೊತ್ತುಗೊತ್ತಿಗೆ ಆಹಾರ ದೊರೆಯುವಂತೆ ಮಾಡಿ ಅವರನ್ನು ಸ್ವಲ್ಪಕಾಲ ಬೆಳೆಸಿದ. ಮಕ್ಕಳು ದೊಡ್ಡವರಾದರು. ಮನುಷ್ಯನಿಗೆ ಹುಟ್ಟಿನಿಂದ ಸಹಜವಾಗಿಯೇ ಮಾತು ಬರುವುದು ಸಾಧ್ಯವಾಗಿದ್ದಲ್ಲಿ ಆ ಮಕ್ಕಳಿಗೆ ಮಾತು ಬಂದಿರಬೇಕಾಗಿತ್ತು. ಆದರೆ ಅವರು ಭಾಷೆ ಎಂದರೆ ಏನೆಂದು ತಿಳಿಯದೆ ಮೂಕರಂತೆ ಬೆಳೆದಿದ್ದರು. ತಮ್ಮ ಸುತ್ತಮುತ್ತ ಇರುವ ಜನರು ಮಾತನಾಡುವುದನ್ನು ನೋಡಿ ಮಕ್ಕಳು ಭಾಷೆಯನ್ನು ಕಲಿತುಕೊಳ್ಳುತ್ತಾರೆಯೇ ಹೊರತು ಅದು ಅವರಿಗೆ ದೇವರಿಂದ ಬಂದದ್ದಲ್ಲ ಎನ್ನುವುದು ಇದರಿಂದ ತಿಳಿಯುತ್ತದೆ.



ಆದರೆ ಅವರು ಭಾಷೆಯೆಂದರೆ ಏನೆಂದು ತಿಳಿಯದೆ ಮೂಕರಂತೆ ಬೆಳೆದಿದ್ದರು

ಭಾಷೆ ವಾಸ್ತವವಾಗಿ ಮನುಷ್ಯನೇ ರೂಪಿಸಿಕೊಂಡದ್ದು. ಅದಕ್ಕೆ ಮುಂಚೆ ಅವನು ಇತರ ಪ್ರಾಣಿಗಳಂತೆ 'ಮೂಕಪ್ರಾಣಿ'ಯಾಗಿಯೇ ಇದ್ದ. ಪ್ರಾಣಿಗಳಿಗೆ ಇಲ್ಲದ ಬುದ್ಧಿಶಕ್ತಿ ಅವನಲ್ಲಿ ಇದ್ದುದರಿಂದ ಕ್ರಮೇಣ ಅವನೇ ಭಾಷೆಯನ್ನು ಸೃಷ್ಟಿಸಿದ. ಅದೇನು ಒಂದು ದಿನದಲ್ಲಿ, ಒಂದು ತಿಂಗಳಲ್ಲಿ ಒಂದು ವರ್ಷದಲ್ಲಿ ಅಥವಾ ಒಬ್ಬ ವ್ಯಕ್ತಿಯಿಂದ ಆಗಲಿಲ್ಲ. ಬೇರೆಯವರಿಗೆ ಏನನ್ನಾದರೂ ತಿಳಿಸಬೇಕು ಎನ್ನಿಸಿದಾಗ ಮೊದಲು ಅವನು ಸನ್ನೆ ಸಂಕೇತಗಳನ್ನು ಕೂಗುಗಳನ್ನು ಬಳಸುತ್ತಿದ್ದ. ಉದಾಹರಣೆಗೆ ಪೆರುವಿಯನ್ ಪ್ರದೇಶದ ಇಂಕಾ ಎಂಬ ಜನರು ತಮ್ಮ ಕೆಲವು ಅಭಿಪ್ರಾಯಗಳನ್ನು ತಿಳಿಸಲು ಹಗ್ಗವನ್ನು ಉಪಯೋಗಿಸುತ್ತಿದ್ದರು. ಹಗ್ಗಕ್ಕೆ ಒಂದು ಗಂಟು ಹಾಕಿದರೆ ಹತ್ತು ಎಂತಲೂ ಎರಡು ಗಂಟು ಹಾಕಿದರೆ ಇಪ್ಪತ್ತು ಎಂತಲೂ ಐದು



ಅವರಲ್ಲಿ ಒಂದು ಗಂಟು ಎಂದರೆ ಹತ್ತು ಎಂದು ಲೆಕ್ಕ

ಗಂಟು ಹಾಕಿದರೆ ಐವತ್ತು ಎಂತಲೂ ಅವರಲ್ಲಿ ಅರ್ಥವಾಗುತ್ತಿತ್ತು. ಬಿಳಿಯ ದಾರವನ್ನು ಬೆಳ್ಳಿಗೆ. ಹಸಿರು ದಾರವನ್ನು ಬೇರೆ ಬೇರೆ ಧಾನ್ಯಗಳಿಗೆ, ಕೆಂಪು ದಾರವನ್ನು ಸೈನಿಕರಿಗೆ ಸಂಕೇತಗಳಾಗಿ ಬಳಸುತ್ತಿದ್ದರು. ಮನುಷ್ಯ ಇಂಥ ಸ್ಥಿತಿಯಿಂದ ಕ್ರಮೇಣ ಮಾತನ್ನು ಬಳಸುವ ಸ್ಥಿತಿಗೆ ಬಂದ.

ಕೆಲವು ದೇಶದ ಜನ ತಮ್ಮ ಭಾಷೆಯೇ ಜಗತ್ತಿನ ಮೊದಲ ಭಾಷೆಯೆಂದೂ ಅದರಿಂದಲೇ ಮುಂದೆ ಬೇರೆ ಭಾಷೆಗಳು ಹುಟ್ಟಿದುವೆಂದೂ ಭಾವಿಸಿದ್ದರು. ಇದು ನಿಜವಲ್ಲ. ಈ ಸಂಬಂಧವಾಗಿ ಎರಡುಸಾವಿರ ವರ್ಷಗಳ ಹಿಂದೆ ಇದ್ದ ಹೆರೊಡೋಟಸ್ ಎಂಬ ಗ್ರೀಕ್ ಚರಿತ್ರೆಕಾರ ಒಂದು ತಮಾಷೆಯಾದ ಕಥೆ ಹೇಳಿದ್ದಾನೆ. ಪ್ರಪಂಚದ ಮೊದಲ ಭಾಷೆ ಯಾವುದು ಎಂದು ತಿಳಿಯಲು ಬಹಳ ಹಿಂದೆ ಈಜಿಪ್ಟಿನ ರಾಜನಾಗಿದ್ದ ಸಮ್ಮೆಟಿಕೋಸ್ ಎಂಬ ದೊರೆ ಒಂದು ಸಂಶೋಧನೆ ನಡೆಸಿದನಂತೆ. ಅಕ್ಬರ್ ಮಾಡಿದ ಹಾಗೇ ಅವನೂ ಎರಡು ಚಿಕ್ಕ ಮಕ್ಕಳನ್ನು ಕೆಲವು ಕಾಲ ನಿರ್ಜನ ಪ್ರದೇಶದಲ್ಲಿ ಬೆಳೆಸಿದ. ಅವರನ್ನು ನೋಡಿಕೊಳ್ಳಲು ಒಬ್ಬ ಕುರುಬನನ್ನು ಬಿಟ್ಟಿದ್ದ. ಆ ಮಕ್ಕಳು ಮೊದಲು ಯಾವ ಮಾತು ಆಡುತ್ತವೆಯೋ ಅದೇ ಪ್ರಪಂಚದ ಮೊದಲ ಭಾಷೆ ಎಂದು ಅವನ ಅಭಿಪ್ರಾಯ. ಸ್ವಲ್ಪಕಾಲ ಕಳೆಯಿತು. ಒಮ್ಮೆ ಆ ಮಕ್ಕಳು ತಮ್ಮನ್ನು ನೋಡಿಕೊಳ್ಳುತ್ತಿದ್ದ ಕುರುಬನ ಹತ್ತಿರಕ್ಕೆ ಓಡಿಬಂದು 'ಬೆಕೊಸ್' ಎಂದು ಹೇಳಿದರು. ಬೆಕೊಸ್ ಎಂದರೆ ಫ್ರಿಜಿಯನ್ ಭಾಷೆಯಲ್ಲಿ ರೊಟ್ಟಿ ಎಂದು ಅರ್ಥ. ಹುಡುಗರು ಫ್ರಿಜಿಯನ್ ಭಾಷೆಯಲ್ಲಿ ಮಾತನಾಡಿದರೆಂದು ರಾಜ ತೀರ್ಮಾನಿಸಿದ. ಅದ್ದರಿಂದ ಆ ಭಾಷೆಯೇ ಜಗತ್ತಿನ ಮೊದಲ ಭಾಷೆಯೆಂದೂ ನಿರ್ಧರಿಸಿಬಿಟ್ಟ. ಆದರೆ ಆ ರಾಜನ ಆಸ್ಥಾನದಲ್ಲಿ ಯಾರಾದರೂ ಕನ್ನಡಿಗರು ಇದ್ದರು ಅಂತ ಭಾವಿಸಿಕೊಳ್ಳಿ. ಅವರೇನಾದರೂ ಮಕ್ಕಳು ಬೆಕೊಸ್ ಎಂದುದನ್ನು ಕೇಳಿದ್ದರೆ ಆ ಹುಡುಗರು ಬೆಕ್ಕು ಎಂತಲೋ ಬೇಕು ಎಂತಲೋ ಹೇಳುತ್ತಿದ್ದಾರೆಂದು ಭಾವಿಸುತ್ತಿದ್ದರು. ಆ ಪ್ರಕಾರ ಕನ್ನಡವೇ ಜಗತ್ತಿನ ಮೊದಲ ಭಾಷೆಯಾಗಬೇಕಾಗುತ್ತಿತ್ತು ! ರಾಜನ ಸಂಶೋಧನೆ ಎಷ್ಟು ವಿಚಿತ್ರವಾದದ್ದೆನ್ನಲು ಈ ನಿದರ್ಶನ ಸಾಕು. ಜಗತ್ತಿನ ಮೊದಲ ಭಾಷೆ ಯಾವುದು ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಅಂಥ ಒಂದು ಭಾಷೆ ಹಿಂದೆ ಇದ್ದಿರಬಹುದು. ಆದರೆ ಈಗಲೂ ಅದು ಇರಲು ಸಾಧ್ಯವಿಲ್ಲ.

ಭಾಷೆ ಕೃತಕವಾದದ್ದು ; ಮನುಷ್ಯ ಮಾಡಿಕೊಂಡದ್ದು ಎಂದು ತಿಳಿದೆವು.

ಅದು ಕೃತಕವಾದ ಸಾಧನವಾಗಿರುವುದರಿಂದಲೇ ಅದರಲ್ಲಿರುವ ಪದಗಳಿಗೂ ಅವು ಸೂಚಿಸುವ ವಸ್ತುಗಳಿಗೂ ಸಹಜವಾದ ಯಾವ ಸಂಬಂಧವೂ ಇಲ್ಲ. ಮರಕ್ಕೆ ಮರ ಎನ್ನುವ ಹೆಸರೇ ಸರಿ ; ಕಲ್ಲಿಗೆ ಕಲ್ಲು ಎನ್ನುವ ಹೆಸರೇ ಸರಿ ಎಂದು ಈಗ ನಮಗೆ ಅನ್ನಿಸಬಹುದು. ಆದರೆ ಹಿಂದಿನಿಂದ ಮರವನ್ನು ಕಲ್ಲು ಎಂದೂ ಕಲ್ಲನ್ನು ಮರ ಎಂದೂ ಕರೆದುಕೊಂಡು ಬಂದಿದ್ದೆವೆಂದು ಭಾವಿಸೋಣ. ಆಗ ಮರಕ್ಕೆ ಕಲ್ಲು ಎಂದೇ ಹೆಸರಾಗಿರುತ್ತಿತ್ತು. ಹಾಗೆಯೇ ಕಲ್ಲಿಗೆ ಮರ ಎಂಬ ಹೆಸರೇ ಇರುತ್ತಿತ್ತು. ಆಗ ನಾವು ಹಣ್ಣು ಬೀಳಿಸಲು ಕಲ್ಲಿನಿಂದ ಮರಕ್ಕೆ ಹೊಡೆಯುತ್ತಿರಲಿಲ್ಲ–ಮರದಿಂದ ಕಲ್ಲಿಗೆ ಹೊಡೆಯುತ್ತಿದ್ದೆವು ! ಮನುಷ್ಯರಿಗೆ ಯಾವ ಹೆಸರು ಕೊಟ್ಟರೂ ಹೇಗೆ ತಡೆಯುತ್ತದೋ ಪದಾರ್ಥಗಳಿಗೂ ಹಾಗೆಯೇ. ಒಂದೇ ವಸ್ತುವಿಗೆ ಬೇರೆ ಬೇರೆ ಭಾಷೆಯಲ್ಲಿ ಬೇರೆ ಬೇರೆ ಹೆಸರುಗಳಿಲ್ಲವೆ ? ನೀರು ಒಂದೇ. ಆದರೆ ಸಂಸ್ಕೃತದಲ್ಲಿ ಅದು 'ಜಲ' ಆಗಿದೆ ; ಇಂಗ್ಲಿಷಿನಲ್ಲಿ 'ವಾಟರ್' ಆಗಿದೆ ; ಹಿಂದಿಯಲ್ಲಿ 'ಪಾನೀ' ಆಗಿದೆ. ಜಗತ್ತಿನ ಎಲ್ಲ ಭಾಷೆಗಳಲ್ಲೂ ಅದಕ್ಕೆ ಒಂದೊಂದು ಬೇರೆ ಹೆಸರಿದೆ ; ಒಂದು ವಸ್ತುವಿಗೆ ಹತ್ತು ಹೆಸರಿವೆ ಎನ್ನುವುದೇ ವಸ್ತುವಿಗೂ ಹೆಸರಿಗೂ ಇರುವ ಸಂಬಂಧ ಸಹಜವಾದದ್ದಲ್ಲ, ನಾವು ಕಲ್ಪಿಸಿದ್ದು ಎನ್ನುವುದನ್ನು ತೋರಿಸುತ್ತದೆ.

ಹೀಗೆಯೇ ಭಾಷೆಗೂ ಲಿಪಿಗೂ ಇರುವ ಸಂಬಂಧ ಸಹ ಕಲ್ಪಿತವಾದದ್ದು. ಕನ್ನಡ ಮಾತನ್ನು ಬರೆಯುವಾಗ ನಾವು ಅ ಇ ಕ ಗ ಇತ್ಯಾದಿ ಅಕ್ಷರಗಳನ್ನು ಬಳಸುತ್ತೇವಷ್ಟೆ. ಇವೆಲ್ಲ ಒಂದೊಂದು ಧ್ವನಿಗೆ ಮಾಡಿಕೊಂಡ ಸಂಕೇತಗಳು. ಇಂಥ ಸಂಕೇತ ವ್ಯವಸ್ಥೆಯನ್ನು ಲಿಪಿ ಎನ್ನುತ್ತೇವೆ. ಕೆಲವರು ಲಿಪಿಯನ್ನೇ ಭಾಷೆ ಎಂದು ತಪ್ಪು ತಿಳಿದಿದ್ದಾರೆ. ಅದು ಭಾಷೆಯಲ್ಲ ; ಭಾಷೆಯನ್ನು ಬರೆಹದಲ್ಲಿ ಹಿಡಿದಿಡಲು ಮಾಡಿಕೊಂಡ ಕೃತಕ ಸಾಧನ. ಲಿಪಿಯಿಲ್ಲದ ಎಷ್ಟೋ ಭಾಷೆಗಳಿವೆ. ಉದಾಹರಣೆಗೆ : ಕೊಂಕಣಿ ಭಾಷೆ. ಕೊಂಕಣಿಗೆ ಲಿಪಿ ವ್ಯವಸ್ಥೆಯೇ ಇಲ್ಲ. ಅದನ್ನು ಬರೆಯಲು ಬೇರೆ ಭಾಷೆಯ ಲಿಪಿಯನ್ನು ಬಳಸುತ್ತಾರೆ. ಲಿಪಿಗೂ ಭಾಷೆಗೂ ಸಹಜವಾದ ಸಂಬಂಧ ಇಲ್ಲದಿರುವುದರಿಂದಲೇ ಒಂದು ಭಾಷೆಯ ಮಾತನ್ನು ಬೇರೆ ಭಾಷೆಯ ಲಿಪಿಯಲ್ಲೂ ಬರೆಯುವುದು ಸಾಧ್ಯ. ಕನ್ನಡದ ಪದವನ್ನೇ ನಾವು ಸಂಸ್ಕೃತ, ಹಿಂದಿ, ತೆಲುಗು–ಹೀಗೆ ಅನೇಕ ಭಾಷೆಗಳಲ್ಲಿ ಬರೆಯಬಹುದಲ್ಲವೆ ? ಲಿಪಿ ಏನಿದ್ದರೂ ಭಾಷೆಯ ಪ್ರಯೋಜನವನ್ನು ಹೆಚ್ಚಿಸಿಕೊಳ್ಳುವ ಒಂದು ಸಾಧನ ಅಷ್ಟೆ. ಭಾರತದಲ್ಲಿರುವ

ಎಲ್ಲ ಭಾಷೆಗಳ ಲಿಪಿಗಳೂ ಬ್ರಾಹ್ಮೀಲಿಪಿ ಎಂಬ ಒಂದೇ ಲಿಪಿಯಿಂದ ಹುಟ್ಟಿದವು.

ನಾವು ಆಡುವ ಕನ್ನಡ ಭಾಷೆ ದ್ರಾವಿಡ ಭಾಷಾವರ್ಗಕ್ಕೆ ಸೇರಿದ್ದು. ದ್ರಾವಿಡ ಭಾಷೆಗಳಲ್ಲಿ ಮುಖ್ಯವಾದುವೆಂದರೆ ತಮಿಳು, ಕನ್ನಡ, ತೆಲುಗು, ಮಲಯಾಳ ಮತ್ತು ತುಳು. ಇವುಗಳನ್ನು ಪಂಚದ್ರಾವಿಡ ಎಂದು ಕರೆಯುತ್ತಾರೆ. ಇವುಗಳಲ್ಲದೆ ಪರ್ಜಿ, ಬಲ್ಹಾರಿ, ಕುರುಖ್ ಮೊದಲಾದ (ಇನ್ನೂ ಅಷ್ಟು ಬೆಳೆದಿಲ್ಲದ) ಕೆಲವು ಭಾಷೆಗಳೂ ಇವೆ. ಮೊದಲು ಈ ಎಲ್ಲ ಭಾಷೆಗಳಿಗೂ ಮೂಲವಾದ ಒಂದು ಭಾಷೆ ಇದ್ದು ಅದರಿಂದ ಹುಟ್ಟಿದುವು ಎಂದು ವಿದ್ವಾಂಸರು ಹೇಳುತ್ತಾರೆ. ಇವೆಲ್ಲಕ್ಕೂ ತಾಯಿಯಾಗಿದ್ದ ಆ ಭಾಷೆಯನ್ನು ಮೂಲ ದ್ರಾವಿಡ ಭಾಷೆ ಎನ್ನಬಹುದು. ತಮಿಳು, ತೆಲುಗು, ತುಳು, ಮಲಯಾಳ ಭಾಷೆಗಳು ಕನ್ನಡ ಭಾಷೆಗೆ ಅಣ್ಣ ತಮ್ಮಂದಿರು ಇದ್ದ ಹಾಗೆ. ಆದ್ದರಿಂದ ಅವುಗಳನ್ನು ಕನ್ನಡದ ಸೋದರ ಭಾಷೆಗಳು ಎಂದು ಹೇಳುತ್ತಾರೆ. ಸೋದರರ ಮುಖದಲ್ಲಿ, ಅವರು ಒಂದೇ ಕುಟುಂಬಕ್ಕೆ ಸೇರಿದವರು ಎನ್ನುವುದನ್ನು ಸೂಚಿಸುವ ಕೆಲವು ಹೋಲಿಕೆಯ ಅಂಶಗಳು ಇರುವುದಿಲ್ಲವೆ ? ಹಾಗೆಯೇ ಈ ಸೋದರ ಭಾಷೆಗಳಲ್ಲೂ ಅನೇಕ ಹೋಲಿಕೆಗಳಿವೆ. ದಿನನಿತ್ಯದ ವ್ಯವಹಾರದಲ್ಲಿ ನಾವು ಬಳಸುವ ಕೆಲವು ಮುಖ್ಯ ಪದಗಳು (ಸ್ವಲ್ಪ ವ್ಯತ್ಯಾಸದೊಡನೆ) ಆ ಭಾಷೆಯಲ್ಲೂ ಇವೆ. ಅಷ್ಟೇ ಅಲ್ಲ, ವ್ಯಾಕರಣ, ವಾಕ್ಯರಚನೆ ಮೊದಲಾದ ವಿಷಯಗಳಲ್ಲಿಯೂ ಈ ಎಲ್ಲ ಭಾಷೆಗಳು ಬಹುಮಟ್ಟಿಗೆ ಒಂದೇ ರೀತಿಯಲ್ಲಿವೆ. ಇದನ್ನು ಮಾತನಾಡುವ ಜನರು ಬಹುಪಾಲು ದ್ರಾವಿಡ ಜನಾಂಗದವರು. ಆದುದರಿಂದ ಇವುಗಳಿಗೆ ದ್ರಾವಿಡ ಭಾಷೆಗಳು ಎಂಬ ಹೆಸರು ಬಂತು.

ಆದರೆ ತುಂಬ ಈಚಿನವರೆಗೂ ಕನ್ನಡ ಭಾಷೆ ಸಂಸ್ಕೃತದಿಂದ ಹುಟ್ಟಿದುದು ಎಂದು ವಿದ್ವಾಂಸರು ತಿಳಿದಿದ್ದರು. ನಮ್ಮ ಭಾಷೆಗೆ ಸೇರಿರುವ ಪದಗಳಲ್ಲಿ ಸಾವಿರಾರು ಪದಗಳು ಸಂಸ್ಕೃತದ ಪದಗಳು. ದೇಹ, ಜೀವ, ಹೃದಯ, ಭಾವ, ಆಲೋಚನೆ, ವಿಚಾರ, ಮನಸ್ಸು, ಬುದ್ಧಿ, ಜನ, ಪತ್ನಿ, ಪುತ್ರ, ಮಿತ್ರ, ಶತ್ರು, ವಿಶ್ರಾಂತಿ, ಕ್ರೂರ, ಚಿಂತೆ, ಸುಖ, ದುಃಖ, ದೇವ, ಪೂಜೆ, ವಿರೋಧ, ಸ್ನೇಹ–ಈ ಎಲ್ಲ ಪದಗಳೂ ನಮಗೆ ಗೊತ್ತು. ಇವುಗಳನ್ನು ನಮ್ಮ ಮಾತಿನಲ್ಲಿ ಬಳಸುತ್ತಲೂ ಇದ್ದೇವೆ. ಆದರೆ ಇವೆಲ್ಲ ನಿಜವಾಗಿ

ಸಂಸ್ಕೃತ ಪದಗಳು. ಇವು ನಮ್ಮ ಭಾಷೆಯಲ್ಲಿ ಧಾರಾಳವಾಗಿ ಬೆರೆತಿರುವುದನ್ನು ನೋಡಿ ನಮ್ಮ ಭಾಷೆ ಸಂಸ್ಕೃತದಿಂದಲೇ ಹುಟ್ಟಿದ್ದು ಎಂದು ಹಿಂದಿನ ಜನ ತಿಳಿದಿದ್ದರು. ಆದರೆ ಇದು ತಪ್ಪು, ಸಂಸ್ಕೃತದಿಂದ ಕನ್ನಡಕ್ಕೆ ತುಂಬ ಸಹಾಯವಾಗಿದೆ ಎನ್ನುವುದು ನಿಜ. ಆದರೆ ಅಷ್ಟರಿಂದಲೇ ಸಂಸ್ಕೃತ ಕನ್ನಡದ ತಾಯಿಭಾಷೆ ಆಗಲು ಸಾಧ್ಯವಿಲ್ಲ. ನಾವು ಮಾತನಾಡುವ ಕನ್ನಡದಲ್ಲಿ ಬೇಕಾದಷ್ಟು ಇಂಗ್ಲಿಷ್ ಪದಗಳು ಬೆರೆತಿಲ್ಲವೆ? ಕಾರು, ಪೆಟ್ರೋಲು, ಬೋರ್ಡು, ಬಲ್ಬು, ಡ್ರೈವರು, ಬ್ರೆಡ್ಡು, ಸಿಮೆಂಟು, ಬ್ಯಾಂಕು, ಬಸ್ಸು, ಕಾಲೇಜು, ಚೆಕ್ಕು, ನೋಟು–ಈ ಪದಗಳೆಲ್ಲ ಇಂಗ್ಲಿಷಿನವೇ. ಇವುಗಳನ್ನು ನಾವು ಬಳಸುತ್ತೇವೆ ಎಂದ ಮಾತ್ರಕ್ಕೆ ನಮ್ಮ ಭಾಷೆ ಇಂಗ್ಲಿಷಿನಿಂದ ಬಂತು ಎಂದು ಹೇಳುವುದು ಸಾಧ್ಯವೆ? ನಮಗೆ ತುಂಬ ಸಹಾಯಮಾಡಿದ ಹಿರಿಯರು ಯಾರಾದರೂ ಇದ್ದಾರೆನ್ನೋಣ, ಅವರು ನಮಗೆ ಬಹಳ ಆಪ್ತರಾಗಿರಬಹುದು. ನಾವು ಅವರನ್ನು ತುಂಬ ಇಷ್ಟಪಡಲೂಬಹುದು. ಆದರೆ ಅಷ್ಟರಿಂದಾಗಿ ಅವರು ನಮ್ಮ ತಂದೆತಾಯಿ ಆಗಲು ಸಾಧ್ಯವಿಲ್ಲ. ಸಂಸ್ಕೃತ, ಇಂಗ್ಲಿಷ್ ಮೊದಲಾದ ಭಾಷೆಗಳ ಜೊತೆ ಕನ್ನಡಕ್ಕೆ ಇರುವ ಸಂಬಂಧವನ್ನು ಸ್ನೇಹಸಂಬಂಧ ಎಂದೂ ತಮಿಳು ತೆಲುಗು ಮೊದಲಾದ ದ್ರಾವಿಡ ಭಾಷೆಗಳ ಜೊತೆ ಅದಕ್ಕೆ ಇರುವ ಸಂಬಂಧವನ್ನು ರಕ್ತಸಂಬಂಧ ಎಂದೂ ಕರೆಯಬಹುದು.

ಕನ್ನಡ ದ್ರಾವಿಡಭಾಷೆ ಎಂದು ತಿಳಿಯುವುದು ಹೇಗೆ ಎಂಬ ಪ್ರಶ್ನೆ ನಿಮಗೆ ಬರಬಹುದು. ಅದು ದ್ರಾವಿಡ ಭಾಷಾವರ್ಗಕ್ಕೆ ಸೇರಿದ್ದು ಎನ್ನುವುದನ್ನು ತಿಳಿಸಿಕೊಡುವ ಬೇಕಾದಷ್ಟು ಸಾಕ್ಷಿಗಳು ಕನ್ನಡ ಭಾಷೆಯಲ್ಲಿಯೇ ದೊರೆಯುತ್ತವೆ.

ಇಂಥ ಮೊದಲ ಸಾಕ್ಷಿಯೆಂದರೆ ಕೆಲವು ಮೂಲಭೂತ ಶಬ್ದಗಳು ಎಲ್ಲ ದ್ರಾವಿಡ ಭಾಷೆಗಳಲ್ಲೂ ಹೆಚ್ಚುಕಡಮೆ ಒಂದೇ ಆಗಿರುವುದು. ಕಣ್ಣು, ಕಿವಿ, ಮೂಗು, ಬಾಯಿ, ಅಪ್ಪ, ಅಮ್ಮ, ನೀರು, ನೆಲ, ಆಕಾಶ, ಮನೆ, ಉಪ್ಪು, ತಿನ್ನು, ಕುಡಿ, ಹೋಗು, ಕೇಳು, ಹೇಳು, ನಾನು, ನೀನು, ಒಂದು, ಎರಡು, ಮಲಗು–ಈ ಬಗೆಯ ಪದಗಳನ್ನು ಮೂಲಭೂತ ಶಬ್ದಗಳ ಗುಂಪಿಗೆ ಸೇರಿಸಬಹುದು. ಸಂಸ್ಕೃತಿ ನಾಗರಿಕತೆಗಳ ಗಂಧವೇ ಇಲ್ಲದ ಜನರ ಭಾಷೆಯಲ್ಲೂ ಈ ಶಬ್ದಗಳು ಇರಲೇಬೇಕಾಗುತ್ತವೆ. ಏಕೆಂದರೆ ಇವುಗಳನ್ನು ಬಳಸದೆ ವ್ಯವಹಾರ ಮಾಡುವುದೇ ಸಾಧ್ಯವಿಲ್ಲ ಎನಿಸುವಷ್ಟು ಮುಖ್ಯವಾದ ಪದಗಳು

ಇವು. ತಮಿಳು ತೆಲುಗು ಮಲಯಾಳ ಮೊದಲಾದ ಭಾಷೆಗಳಲ್ಲಿರುವ ಇಂಥ ಪದಗಳು ಹೆಚ್ಚು ಕಡಿಮೆ ಕನ್ನಡದಲ್ಲಿ ಇರುವ ಪದಗಳೇ ಆಗಿವೆ. ಆದರೆ ಸಂಸ್ಕೃತದಲ್ಲಿ ಇರುವ ಇಂಥ ಪದಗಳು ಕನ್ನಡದ ಪದಗಳಿಗಿಂತ ಬೇರೆಯಾಗಿವೆ. ಈ ಕೆಳಗೆ ಕೆಲವು ಮೂಲಭೂತ ಶಬ್ದಗಳನ್ನು ಆಯ್ದು ಒಂದು ಪಟ್ಟಿ ಮಾಡಿ ಕೊಟ್ಟಿದೆ. ಆ ಪದಗಳು ದ್ರಾವಿಡ ಭಾಷೆಗಳಲ್ಲಿ ಹೇಗಿವೆ, ಸಂಸ್ಕೃತದಲ್ಲಿ ಹೇಗಿವೆ ಎಂದು ಸಾಲಾಗಿ ತೋರಿಸಿದೆ. ಪದದ ಅರ್ಥವನ್ನೂ ಕಡೆಯಲ್ಲಿ ಕೊಟ್ಟಿದೆ. ಕನ್ನಡದ ವಿಭಾಗದಲ್ಲಿ ಕೊಟ್ಟಿರುವ ಪದಗಳು ಈಗ ಹಾಗಿಲ್ಲದಿದ್ದರೂ ಹಳಗನ್ನಡದಲ್ಲಿ ಹಾಗೇ ಇದ್ದುವು.

ಕನ್ನಡ	ತಮಿಳು	ತೆಲುಗು	ಸಂಸ್ಕೃತ	ಪದದ ಅರ್ಥ
ಪುಲಿ	ಪುಲಿ	ಪುಲಿ	ವ್ಯಾಘ್ರ	ಹುಲಿ
ಇಲಿ	ಎಲಿ	ಎಲುಕ	ಮೂಷಕ	ಇಲಿ
ಕೋೞಿ	ಕೋೞಿ	ಕೋಡಿ	ಕುಕ್ಕುಟೀ	ಕೋಳಿ
ಪಾವು	ಪಾಂಬು	ಪಾಮು	ಸರ್ಪ	ಹಾವು
ಪಾಲ್	ಪಾಲ್	ಪಾಲು	ಕ್ಷೀರ	ಹಾಲು
ಬಾಗಿಲ್	ವಾಯಿಲ್	ವಾಕಿಲಿ	ಕವಾಟ	ಬಾಗಿಲು
ಉಪ್ಪು	ಉಪ್ಪು	ಉಪ್ಪು	ಲವಣ	ಉಪ್ಪು
ಪೊಗೆ	ಪುಕೈ	ಪೊಗ	ಧೂಮ	ಹೊಗೆ
ದೊರೆ	ತುರೈ	ದೊರ	ರಾಜ	ರಾಜ
ಕೋಂಟೆ	ಕೋಟ್ಟೈ	ಕೋಟ	ದುರ್ಗ	ಕೋಟೆ
ಅಣ್ಣ	ಅಣ್ಣ	ಅನ್ನ	ಭ್ರಾತೃ	ಅಣ್ಣ
ತಾಯ್	ತಾಯ್	ತಾಯಿ	ಮಾತೃ	ತಾಯಿ
ಪಿಳ್ಳೆ	ಪಿಳ್ಳೈ	ಪಿಳ್ಳ	ಬಾಲ	ಹುಡುಗ
ತಂಗೆ	ತಂಗೈ	ತಂಗ	ಭಗಿನಿ	ತಂಗಿ
ಬೆರಲ್	ವಿರಲ್	ವ್ರೇಲು	ಅಂಗುಲಿ	ಬೆರಳು
ಬಾಯ್	ವಾಯ್	ವಾಯಿ	ವದನ	ಬಾಯಿ
ಕಯ್	ಕಯ್	ಕಯ್	ಹಸ್ತ	ಕೈ
ಕಿವಿ	ಶೆವಿ	ಚೆವಿ	ಕರ್ಣ	ಕಿವಿ

ಕನ್ನಡ	ತಮಿಳು	ತೆಲುಗು	ಸಂಸ್ಕೃತ	ಪದದ ಅರ್ಥ
ಅದು	ಅದು	ಅದಿ	ತತ್	ಅದು
ಇದು	ಇದು	ಇದಿ	ಏತದ್	ಇದು
ಅವರ್	ಅವರ್	ವಾರು	ತೇ	ಅವರು
ನಾನ್	ನಾನ್	ನೇನು	ಅಹಂ	ನಾನು
ನೀನ್	ನೀನ್	ನೀನು	ತ್ವಂ	ನೀನು
ನಗು	ನಗು	ನಗು	ಹಸ್	ನಗು
ತಪ್ಪು	ತಪ್ಪು	ತಪ್ಪು	ದೋಷ	ತಪ್ಪು
ಬಿಡು	ವಿಡು	ವಿಡು	ತ್ಯಜ್	ಬಿಡು

ನಮ್ಮ ನಾಡಿಗೆ ಕರ್ನಾಟಕ ಎಂದು ಹೆಸರು ಬಂದಿದೆಯಷ್ಟೆ. ಮೊದಲು ಅದು ಕರ್ನಾಡು ಎಂದಷ್ಟೇ ಇದ್ದಿರಬೇಕು. ಸಂಸ್ಕೃತದಲ್ಲಿ ಅದನ್ನೇ ಕರ್ಣಾಟ ಎಂದು ಕರೆದರು. ಮಹಮ್ಮದೀಯರು ಹಿಂದೆ ದಕ್ಷಿಣ ಭಾರತಕ್ಕೆ ಬಂದಾಗ ಈ ನಾಡನ್ನು ಕರ್ನಾಟಕ ಎಂದು ಕರೆದರು. ಮುಂದೆ ಇಂಗ್ಲಿಷರು ಇಲ್ಲಿಗೆ ಬಂದಾಗ ಘಾಟಿಗಳ (ghats) ಕೆಳಗಿನ ಭಾಗವನ್ನು ಕರ್ನಾಟಕ್ ಎಂದು ಕರೆದರು. ಈಗ ಇಡೀ ನಾಡಿಗೇ ಆ ಹೆಸರು ಅನ್ವಯವಾಗಿದೆ.

ಮೊದಲು ಇದ್ದ ಹೆಸರು ಕರ್ನಾಡು ಎಂದು ಹೇಳಿತಷ್ಟೆ. ಕರ್ ನಾಡು ಎಂದರೆ ಕಪ್ಪುಭೂಮಿ ಅಂತ ಅರ್ಥ. ಕರ್ನಾಟಕದ ನೆಲ ಕಪ್ಪು ಮಣ್ಣಿನ ಭೂಮಿ. ಆದ್ದರಿಂದ ಈ ಹೆಸರು ಬಂದಿರಬೇಕು. ಕೆಲವರು ಕರ್‌ನಾಡು ಅಲ್ಲ ಕರುನಾಡು ಎನ್ನುವುದೇ ಸರಿಯಾದದ್ದು ಎನ್ನುತ್ತಾರೆ. ಕರುನಾಡು ಎಂದರೆ ಎತ್ತರವಾದ ಪ್ರದೇಶ ಎಂದು ಅರ್ಥ. ನಮ್ಮ ನಾಡು ಸಮುದ್ರ ಮಟ್ಟದಿಂದ ತುಂಬ ಎತ್ತರದಲ್ಲಿ ಇರುವುದರಿಂದ ಈ ವಿವರಣೆಯೂ ಸರಿಯಾಗಿ ಕಾಣುತ್ತದೆ. ಸಂಸ್ಕೃತದಲ್ಲಿ ಕರ್‌ನಾಡು ಎಂಬ ಮಾತನ್ನು ಕರ್ನಾಟ ಎಂದು ಕರೆದರಷ್ಟೆ. ಆ ಕರ್ನಾಟ ಪದದ ತದ್ಭವವೇ ಕನ್ನಡ. ನಮ್ಮ ನಾಡಿನ ಹೆಸರು ಸಂಸ್ಕೃತದಲ್ಲಿ ಬೇರೆ ರೀತಿಯಾಗಿ ಹೊರಳಿ ಅದರಿಂದ ಪುನಃ ನಾವು ಪಡೆದ ಇನ್ನೊಂದು ಹೆಸರು ಕನ್ನಡ !

ಕನ್ನಡ ಭಾಷೆ ಮತ್ತು ಲಿಪಿಗಳು ಯಾವಾಗ ಆರಂಭಗೊಂಡವು ? ಇದು ನಿಶ್ಚಿತವಾಗಿ ಉತ್ತರಿಸಲು ಆಗದ ಒಂದು ಪ್ರಶ್ನೆ. ದ್ರಾವಿಡ ಭಾಷೆಗಳಿಗೆಲ್ಲ

ಮೂಲ ಭಾಷೆಯಾಗಿ ಪೂರ್ವದ್ರಾವಿಡ ಎನ್ನಬಹುದಾದ ಒಂದು ಭಾಷೆ ಒಂದೆ ಇದ್ದಿರಬೇಕು. ಆ ಪೂರ್ವದ್ರಾವಿಡವನ್ನು ಒಂದು ಮರಕ್ಕೆ ಹೋಲಿಸುವುದಾದರೆ ತಮಿಳು ಕನ್ನಡ ತೆಲುಗು ಮೊದಲಾದವುಗಳನ್ನು ಅದರ ಬೇರೆ ಬೇರೆ ಶಾಖೆ ಅಥವಾ ಕೊಂಬೆಗಳಿಗೆ ಹೋಲಿಸಬಹುದು. ಹಾಗೆ ಮೊದಲು ಕಾಣಿಸಿಕೊಂಡ ಶಾಖೆ ತಮಿಳು. ಅನಂತರ ಬಂದದ್ದು ಕನ್ನಡ. ಕನ್ನಡ ಭಾಷೆ ಯಾವಾಗ ಕಾಣಿಸಿಕೊಂಡಿತು ಎಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ನಮಗೆ ಗೊತ್ತಿರುವ ಹಾಗೆಯೇ ಅದು ೧೬೦೦ ವರ್ಷಗಳಷ್ಟು ಹಳೆಯದು. ಇನ್ನೂ ಸ್ವಲ್ಪ ಹಿಂದೆಯೇ ಅದು ಇತ್ತು ಎಂದು ಊಹಿಸಬಹುದು. ಈ ಬಗ್ಗೆ ನಮಗೆ ದೊರೆಯುವ ಒಂದೆರಡು ಸಂಗತಿಗಳನ್ನು ಇಲ್ಲಿ ನೋಡೋಣ.

ಕನ್ನಡ ಲಿಪಿ ಹೇಗೆ ಬಂದಿತು ಎಂಬ ಬಗ್ಗೆ ಜೈನಸಂಪ್ರದಾಯದ ಪ್ರಕಾರ ಒಂದು ಕಥೆ ಇದೆ. ಬಹಳ ಹಿಂದೆ ವೃಷಭದೇವ ಎಂಬ ಒಬ್ಬ ತೀರ್ಥಂಕರ ಇದ್ದ. ಅವನು ಮೊದಲನೆಯ ತೀರ್ಥಂಕರ. ಅವನಿಗೆ ಬ್ರಾಹ್ಮಿ ಎಂಬ ಒಬ್ಬ ಮಗಳಿದ್ದಳು. ಅವಳಿಂದ ಹದಿನೆಂಟು ಲಿಪಿಗಳು ಸೃಷ್ಟಿಯಾದುವು. ಆ ಲಿಪಿಗಳಲ್ಲಿ ಕನ್ನಡವೂ ಒಂದು. ಇದು ನಿಜವೋ ಸುಳ್ಳೋ—ಹೇಗಾದರೂ ಇರಲಿ. ಆದರೆ ಬಹಳ ಹಿಂದೆಯೇ ಇದ್ದ ಬ್ರಾಹ್ಮೀ ಎಂಬ ಒಂದು ಲಿಪಿಯಿಂದಲೇ ಎಲ್ಲ ಭಾರತೀಯ ಭಾಷೆಗಳಿಗೂ ಲಿಪಿಗಳು ದೊರೆತವು ಎನ್ನುವುದು ಮಾತ್ರ ವಾಸ್ತವವಾದ ವಿಷಯ.

ಬೇರೆ ಭಾಷೆಯೊಂದರಲ್ಲಿ ರಚಿತವಾದ ಒಂದು ಹಳೆಯ ನಾಟಕದಲ್ಲಿ ಕೆಲವು ಕನ್ನಡದ ಮಾತುಗಳಿವೆ ಎಂದು ಅನೇಕ ವಿದ್ವಾಂಸರು ಪತ್ತೆಹಚ್ಚಿದ್ದಾರೆ. ವಿಶೇಷವೆಂದರೆ ಆ ನಾಟಕ ಈ ದೇಶದ್ದೇ ಅಲ್ಲ. ಅದು ಒಂದು ಗ್ರೀಕ್ ನಾಟಕ ; ಹಾಸ್ಯಪ್ರಧಾನವಾದ ಈ ನಾಟಕ ಕ್ರಿ.ಶ. ಎರಡನೆಯ ಶತಮಾನದ ಕಾಲದ್ದು. ಆ ನಾಟಕದ ಹೆಸರು 'ಆಕ್ಸಿರಿಂಚಸ್ ಪ್ಯಾಪಿರೈ' ಎಂದು. ಈಜಿಪ್ಟ್ ದೇಶದಲ್ಲಿ ನೈಲ್ ನದಿಯ ದಕ್ಷಿಣ ಭಾಗದಲ್ಲಿ ಭೂಶೋಧನೆ ನಡೆಯುತ್ತಿದ್ದಾಗ ಈ ನಾಟಕ ಸಿಕ್ಕಿತು. ಅದರ ಕಥೆ ಸುಮಾರಾಗಿ ಹೀಗಿದೆ :

ದಕ್ಷಿಣ ಭಾರತದ ಕರಾವಳಿ ಪ್ರದೇಶದಲ್ಲಿ ಒಬ್ಬ ದೊರೆಯಿದ್ದ. ಅವನು ಗ್ರೀಕ್ ದೇಶದ ಚೆಲುವೆಯೊಬ್ಬಳನ್ನು ಅಪಹರಿಸಿಕೊಂಡು ತನ್ನ ರಾಜಧಾನಿಗೆ ಹೊರಟು ಬಂದ. ಆ ಯುವತಿಯ ಸಂಬಂಧಿಕರು ಅವಳನ್ನು ಉಪಾಯವಾಗಿ ತಮ್ಮ ದೇಶಕ್ಕೆ ಕರೆತರುವ ಉದ್ದೇಶದಿಂದ ಆ ದೊರೆಯ ರಾಜ್ಯಕ್ಕೆ ಬಂದರು :




ಶಿವನು ಅಮಲಿನಲ್ಲಿ ಮೈಮರೆತಿದ್ದಾಗ ಆ ಯುವತಿಯ ಜೊತೆ ಪಲಾಯನ ಮಾಡಿದರು

ಸಮಯ ಸಾಧಿಸಿ ಅವನು ಚೆನ್ನಾಗಿ ಮದ್ಯಪಾನ ಮಾಡುವ ಹಾಗೆ ಮಾಡಿದರು. ಅವನು ಅಮಲಿನಲ್ಲಿ ಮೈಮರೆತ ಹೊತ್ತಿನಲ್ಲಿ ಯುವತಿಯನ್ನು ಬಿಡಿಸಿಕೊಂಡು ತಮ್ಮ ದೇಶಕ್ಕೆ ಪರಾರಿಯಾದರು.

ನಾಟಕದಲ್ಲಿ ಬರುವ ಈ ಕರಾವಳಿ ಪ್ರದೇಶ ತುಳುನಾಡು ಇರಬೇಕೆಂದು ವಿದ್ವಾಂಸರ ಊಹೆ. ಆಗ ತುಳುನಾಡನ್ನು ಆಳುತ್ತಿದ್ದ ಆಳುಪ ವಂಶದ ಒಬ್ಬ ದೊರೆಯೇ ಯುವತಿಯನ್ನು ಕರೆತಂದ ರಾಜನಾಗಿರಬೇಕೆಂದೂ ಅವರು ಊಹೆ ಮಾಡಿದ್ದಾರೆ. ಆ ಕಾಲದಲ್ಲಿ ಗ್ರೀಕರು, ರೋಮನ್ನರು ಮತ್ತು ಈಜಿಪ್ಟಿನವರು ನಮ್ಮ ನಾಡಿನ ಜೊತೆ ವ್ಯಾಪಾರ ಸಂಬಂಧ ಇಟ್ಟುಕೊಂಡಿದ್ದರು. ಆದ್ದರಿಂದ ಎರಡೂ ಪ್ರದೇಶಗಳ ಜನಗಳ ನಡುವೆ ಸಂಪರ್ಕ ಇದ್ದಿರಬೇಕು. ಆ ಗ್ರೀಕ್ ನಾಟಕದಲ್ಲಿ ಬೇರೆ ಭಾಷೆಯ ಕೆಲವು ಮಾತುಗಳು ಬಂದಿವೆ. ಆ ಮಾತುಗಳು ಮೇಲೆ ಹೇಳಿದ ಕರಾವಳಿ ಪ್ರದೇಶದಲ್ಲಿ ಆಗ ರೂಢಿಯಲ್ಲಿದ್ದ ಭಾಷೆಯ ಮಾತುಗಳು. ಆಗ ಇಲ್ಲಿ ರೂಢಿಯಲ್ಲಿ ಇದ್ದಿರಬಹುದಾದ ಭಾಷೆ ಕನ್ನಡ ಹೊರತು ಬೇರಾವುದೂ ಅಲ್ಲ ಎಂದು ವಿದ್ವಾಂಸರ ಅಭಿಪ್ರಾಯ. ಆದರೆ ಆ ಕಾಲದ ಕನ್ನಡದ ಮಾತುಗಳು ಇಂಥ ರೀತಿಯಲ್ಲಿಯೇ ಇದ್ದುವು ಎಂದು ಖಚಿತವಾಗಿ ಹೇಳುವುದು ಕಷ್ಟ.

ಕನ್ನಡದ ಸ್ಪಷ್ಟವಾದ ಬರವಣಿಗೆ ನಮಗೆ ಸಿಕ್ಕಿರುವುದು ಒಂದು ಹಳೆಯ ಶಾಸನದಲ್ಲಿ. ಅದರ ಹೆಸರು ಹಲ್ಮಿಡಿ ಶಾಸನ. ಶಾಸನದ ಕಾಲ ಕ್ರಿ. ಶ. ಸುಮಾರು ೪೫೦: ಅದು ಕಲ್ಲಿನಲ್ಲಿ ಕೊರೆದ ಶಾಸನ. ಅದರಲ್ಲಿರುವ ಬರೆಹ ಕನ್ನಡದ್ದು. ಆ ಕನ್ನಡ ಹಳಗನ್ನಡಕ್ಕಿಂತಲೂ ಹಳೆಯದಾದ ಕನ್ನಡ. ಆ ಶಾಸನದ ಸಾರಾಂಶ ಇಷ್ಟು: ಕದಂಬರಲ್ಲಿ ಪ್ರಸಿದ್ಧ ರಾಜನಾದ ಕಾಕುತ್ಸ್ಥವರ್ಮ ಆಗ ಆಳುತ್ತಿದ್ದ. ಆ ದಿನಗಳಲ್ಲಿ ನಡೆದ ಒಂದು ಯುದ್ಧದಲ್ಲಿ ವಿಜ ಅರಸ ಎಂಬ ಯೋಧ ವಿಶೇಷ ಪರಾಕ್ರಮದಿಂದ ಹೋರಾಡಿದ. ಶತ್ರುಗಳನ್ನು ಹೊಡೆದೋಡಿಸಿದ. ಅವನ ಶೌರ್ಯಕ್ಕೆ ಮೆಚ್ಚಿ ಇಬ್ಬರು ವೀರಭಟರು ಪಲ್ಮಿಡಿ (ಹಲ್ಮಿಡಿ) ಮತ್ತು ಮೂಳಿವಳ್ಳಿ ಎಂಬ ಹಳ್ಳಿಗಳನ್ನು ಅವನಿಗೆ ದಾನವಾಗಿ ಕೊಟ್ಟರು.

ಈ ಶಾಸನದ ನಂತರ ರಚಿತವಾದ ಬೇಕಾದಷ್ಟು ಕನ್ನಡ ಶಾಸನಗಳು ನಮಗೆ ದೊರೆತಿವೆ. ರಾಷ್ಟ್ರಕೂಟ ರಾಜನಾದ ಮಂಗಳೇಶನ ಶಾಸನ, ವೀರನಾದ ಕಪ್ಪೆ ಅರಭಟ್ಟನನ್ನು ಹೊಗಳುವ ಶಾಸನ, ಮತ್ತು ಶ್ರವಣ



ವಿಜ ಅರಸನ ಶೌರ್ಯಕ್ಕೆ ಮೆಚ್ಚಿ ಎರಡು ಹಳ್ಳಿಗಳನ್ನು ದಾನವಾಗಿ ಕೊಟ್ಟರು ಬೆಳುಗೊಳದ ಶಾಸನಗಳು ಇವುಗಳಲ್ಲಿ ಮುಖ್ಯವಾದುವು. ಇವುಗಳಲ್ಲಿ ಪದ್ಯ ಗದ್ಯ ಎರಡೂ ಸೇರಿವೆ.

ಗ್ರಂಥದ ರೂಪದಲ್ಲಿ ನಮಗೆ ಸಿಕ್ಕಿರುವ ಮೊದಲನೆಯ ಬರೆಹ ೯ನೆಯ ಶತಮಾನದಲ್ಲಿ ರಚಿತವಾದದ್ದು. ಅದರ ಹೆಸರು ಕವಿರಾಜಮಾರ್ಗ. ಅದಕ್ಕಿಂತ ಮುಂಚೆಯೂ ಎಷ್ಟೋ ಕನ್ನಡ ಗ್ರಂಥಗಳ ರಚನೆಯಾಗಿತ್ತು. ಆ ವಿಷಯ ಕವಿರಾಜಮಾರ್ಗದಿಂದಲೇ ತಿಳಿಯುತ್ತದೆ. ವಿಮಲೋದಯ, ನಾಗಾರ್ಜುನ, ಜಯಬಂಧು, ಪಂಡಿತ, ಲೋಕಪಾಲ ಮೊದಲಾದ ಶ್ರೇಷ್ಠ ಗದ್ಯಕಾರರು ಮತ್ತು ಕವಿಗಳು ಇದ್ದರೆಂದು ಅದರಲ್ಲಿ ಹೇಳಿದೆ.

ಕನ್ನಡನಾಡು ಎಷ್ಟು ವಿಸ್ತಾರವಾಗಿತ್ತು ಎನ್ನುವುದೂ ಕವಿರಾಜಮಾರ್ಗದಿಂದ ತಿಳಿಯುತ್ತದೆ. ಆಗ ಈ ನಾಡು ದಕ್ಷಿಣಭಾಗದಲ್ಲಿ ಹರಿಯುವ ಕಾವೇರಿ ನದಿಯಿಂದ ಹಿಡಿದು ಉತ್ತರ ಭಾಗದಲ್ಲಿನ ಗೋದಾವರಿ ನದಿಯವರೆಗೆ

ಹರಡಿತ್ತು. ಈಗ ಮಹಾರಾಷ್ಟ್ರದಲ್ಲಿ ಸೇರಿರುವ ಕೆಲವು ಭಾಗಗಳು ಆಗ ನಮ್ಮ ನಾಡಿಗೆ ಸೇರಿದ್ದವು. ಕನ್ನಡಿಗರು ತುಂಬ ಜಾಣರೆಂದೂ ತಮ್ಮ ಭಾಷೆಯನ್ನು ತುಂಬ ಚೆನ್ನಾಗಿ ತಿಳಿದಿದ್ದರೆಂದೂ ಆ ಗ್ರಂಥ ತಿಳಿಸುತ್ತದೆ. ಹೆಚ್ಚು ವ್ಯಾಸಂಗ ಮಾಡದವರು ಸಹ ತಮ್ಮ ಮಾತಿನ ನಡುವೆ ಕಾವ್ಯದ ಮಾತುಗಳನ್ನು ಬಳಸುತ್ತಿದ್ದರಂತೆ. ಕವಿರಾಜಮಾರ್ಗದಿಂದ ಮುಂದಕ್ಕೆ ಉದ್ದಕ್ಕೂ ಬೇಕಾದಷ್ಟು ಕನ್ನಡ ಗ್ರಂಥಗಳು ರಚಿತವಾಗಿವೆ.

ಕನ್ನಡವು ತೆಲುಗು, ತಮಿಳು, ಮಲೆಯಾಳ, ತುಳು ಮೊದಲಾದ ದ್ರಾವಿಡ ಭಾಷೆಗಳ ಕುಟುಂಬಕ್ಕೆ ಸೇರಿದ ಭಾಷೆ ಎಂದು ಹೇಳಿದ್ದೆ. ಇವುಗಳಲ್ಲಿ ತಮಿಳು ಇತರ ದ್ರಾವಿಡ ಭಾಷೆಗಳಿಗಿಂತ ಕನ್ನಡಕ್ಕೆ ಹೆಚ್ಚು ಹತ್ತಿರವಾಗಿದೆ. ತಮಿಳು ಕನ್ನಡಗಳು ಪರಸ್ಪರ ಎಷ್ಟು ಹತ್ತಿರದ ಭಾಷೆಗಳು ಎಂದರೆ ಕೆಲವು ಪದಗಳು ಎರಡು ಭಾಷೆಗಳಲ್ಲೂ ಒಂದೇ ರೀತಿ ಇವೆ. ಅಂಥ ಕೆಲವು ಪದಗಳನ್ನು ಕೆಳಗೆ ಕೊಟ್ಟಿದೆ. ಕನ್ನಡದ ಪದಗಳು ಇಲ್ಲಿ ಕೊಟ್ಟಿರುವ ರೀತಿಯಲ್ಲಿ ಈಗ ಇಲ್ಲ ನಿಜ. ಆದರೆ ಹಳಗನ್ನಡದ ಕಾಲದಲ್ಲಿ ಆ ರೀತಿಯಲ್ಲಿಯೇ ಇದ್ದವು. ಕಷ್ಟಕರವಾಗಿ ತೋರುವ ಪದಗಳಿಗೆ ಪಕ್ಕದಲ್ಲಿ ಅರ್ಥವನ್ನೂ ಕೊಟ್ಟಿದೆ.

ಅಗಲಂ	ತೊಟ್ಟಿಲ್
ಅಡಿ (ಪಾದ)	ನಂಜು (ವಿಷ)
ಅಣ್ಣನ್	ನಾಣ್ (ನಾಚಿಕೆ)
ಅಲರ್ (ಹೂವು)	ನೀರ್
ಆಡು	ನೀಳಂ (ಉದ್ದ)
ಇರುಳ್ (ರಾತ್ರಿ)	ಪಗಲ್ (ಹಗಲು)
ಈಡು (ಗುರಿ)	ಪಣಂ (ಹಣ)
ಕಡಲ್ (ಸಮುದ್ರ)	ಪನಿ (ಹನಿ)
ಕಣ್	ಪಯಿರ್ (ಹಸಿರು ಬೆಳೆ)
ಕತ್ತು	ಪಲ್ (ಹಲ್ಲು)
ಕರಡಿ	ಪಳ್ಳಿ (ಹಳ್ಳಿ)
ಕಲ್	ಪಾಲ್ (ಹಾಲು)
ಕಲಿ (ಶೂರ)	ಪಿಡಿ (ಹಿಡಿ)

ಕಳವು	ಪುಲ್ (ಹುಲ್ಲು)
ಕಳ್ಳಿ	ಪುಲಿ (ಹುಲಿ)
ಕಾಡು	ಪುಳಿ (ಹುಳಿ)
ಕಿಚ್ಚು	ಪೂ (ಹೂ)
ಕೇಡು	ಪೆಣ್ (ಹೆಣ್ಣು)
ಕೊಂಬು	ಪೊನ್ (ಹೊನ್ನು)
ಕೊಳ್ಳಿ	ಪೊಲಂ (ಹೊಲ)
ಚೆಂಡು	ಮಣ್
ಚೆಂಬು	ಮುಗಿಲ್
ತಳಿರ್ (ಚಿಗುರು)	ಮುಡಿ (ತುದಿ, ಶಿಖರ)
ತಾಯ್	ಮುಳ್
ತಿಂಗಳ್ (ಚಂದ್ರ)	ಮೆಯ್
ತೆಂಗು	

ಮೇಲೆ ಕೊಟ್ಟಿರುವುದು ಕೆಲವು ಪದಗಳನ್ನು ಮಾತ್ರ. ಎರಡು ಭಾಷೆಗಳಲ್ಲಿಯೂ ಸಮಾನವಾಗಿರುವ ಇಂಥ ಪದಗಳು ಇನ್ನೂ ಎಷ್ಟೋ ಇವೆ. ಕೆಲವು ಪದಗಳಲ್ಲಿ ತಮಿಳಿಗೂ ಕನ್ನಡಕ್ಕೂ ತೀರ ಸ್ವಲ್ಪ ವ್ಯತ್ಯಾಸ ಇರುತ್ತದೆ. ಆ ವ್ಯತ್ಯಾಸದಲ್ಲಿಯೂ ಒಂದು ಕ್ರಮ ಇರುತ್ತದೆ. ಉದಾಹರಣೆಗೆ ಕೆಳಗಿನ ಪಟ್ಟಿಗಳನ್ನು ನೋಡಿ. ಇಲ್ಲಿ ಕೊಟ್ಟಿರುವ ಕನ್ನಡದ ಪದಗಳು ಹಳಗನ್ನಡದ ಪದಗಳು.

ಕನ್ನಡ	ತಮಿಳು	ಪದದ ಅರ್ಥ
ಪೊನಲ್	ಪುನಲ್	ಹೊನಲು (ಪ್ರವಾಹ)
ಒಡಲ್	ಉಡಲ್	ಒಡಲು (ಹೊಟ್ಟೆ)
ಸೊಡರ್	ಶುಡರ್	ಸೊಡರು (ದೀಪ)
ಮೊದಲ್	ಮುದಲ್	ಮೊದಲು
ಒರಲ್	ಉರಲ್	ಒರಳು

ಮೇಲಿನ ಪಟ್ಟಿಯಲ್ಲಿರುವ ಕನ್ನಡ ಮತ್ತು ತಮಿಳು ಪದಗಳಿಗೆ ವ್ಯತ್ಯಾಸ ಇರುವುದು ಮೊದಲನೆಯ ಅಕ್ಷರದಲ್ಲಿ ಮಾತ್ರ. ಅಲ್ಲಿಯೂ ಒಂದು ಕ್ರಮ

ಇದೆ. ಪೊನಲ್, ಸೊಡರ್, ಮೊದಲ್ ಮೊದಲಾದ ಕನ್ನಡ ಪದಗಳ ಮೊದಲನೆಯ ಅಕ್ಷರ ಒಕಾರದಿಂದ ಕೂಡಿದ ಅಕ್ಷರವಾಗಿದೆ. ತಮಿಳು ಪದಗಳ ಮೊದಲನೆಯ ಅಕ್ಷರದಲ್ಲಿ ಈ ಒಕಾರದ ಬದಲು ಉಕಾರ (ಪುನಲ್, ಸುಡರ್, ಮುದಲ್) ಇದೆ. ಇನ್ನು ಕೆಲವು ಪದಗಳನ್ನು ಗಮನಿಸಿ.

ಕನ್ನಡ	ತಮಿಳು	ಪದದ ಅರ್ಥ
ಬಲಂ	ವಲಂ	ಶಕ್ತಿ
ಬಿದರ್	ವೆದಿರ್	ಬಿದಿರು
ಬೆಳ್ಳಿ	ವೆಳ್ಳಿ	ಬೆಳ್ಳಿ
ಬಿತ್ತು	ವಿತ್ತು	ಬಿತ್ತು (ಬೀಜ ಬಿತ್ತು)
ಬೇಲಿ	ವೇಲಿ	ಬೇಲಿ
ಬಟ್ಟಲ್	ವಟ್ಟಿಲ್	ಬಟ್ಟಲು
ಬೆರಲ್	ವಿರಲ್	ಬೆರಳು
ಬೇಡರ್	ವೇಡರ್	ಬೇಡರು

ಮೇಲಿನ ಪಟ್ಟಿಯಲ್ಲಿರುವ ಕನ್ನಡ ಪದಗಳ ಮೊದಲನೆಯ ಅಕ್ಷರ 'ಬ' ಕಾರ ಆಗಿದ್ದರೆ ತಮಿಳು ಪದಗಳ ಮೊದಲನೆಯ ಅಕ್ಷರ 'ವ' ಕಾರ ಆಗಿದೆ. ಕೆಳಗಿನ ಪಟ್ಟಿಗಳಲ್ಲೂ ಏಕರೀತಿಯ ವ್ಯತ್ಯಾಸಗಳಿವೆ.

ಎಣ್ಣೆ	ಎಣ್ಣೈ	ಎಣ್ಣೆ
ಮನೆ	ಮನೈ	ಮನೆ
ತೆನೆ	ತಿನೈ	ತೆನೆ
ತಂಗೆ	ತಂಗೈ	ತಂಗಿ
ಕುದುರೆ	ಕುದುರೈ	ಕುದುರೆ
ಕಡಲೆ	ಕಡಲೈ	ಕಡಲೆ
ನೊರೆ	ನುರೈ	ನೊರೆ
ಪೆಣಂ	ಪಿಣಂ	ಹೆಣ
ನೆಣಂ	ನಿಣಂ	ಕೊಬ್ಬು
ಪೆಸರ್	ಪೆಯರ್	ಹೆಸರು
ಉಸಿರ್	ಉಯಿರ್	ಉಸಿರು

ಕನ್ನಡ ಭಾಷೆಗೆ ಕೆಲವು ಉಪಭಾಷೆಗಳೂ ಇವೆ. ಕೊಡಗು, ತೋಡ, ಕೋಟ, ಬಡಗ, ಹವ್ಯಕ–ಇವು ಅಂಥ ಉಪಭಾಷೆಗಳು. ಇವುಗಳೆಲ್ಲ ಕನ್ನಡದಿಂದಲೇ ಹುಟ್ಟಿದುವು. ಈ ಉಪಭಾಷೆಗಳಿಗೆ ಪ್ರತ್ಯೇಕವಾದ ಒಂದು ಲಿಪಿ ಇನ್ನೂ ಇಲ್ಲ. ಜೊತೆಗೆ ಕನ್ನಡದಲ್ಲಿ ಇರುವಂತೆ ಇವುಗಳಲ್ಲಿ ಸಾಹಿತ್ಯವೂ ಇಲ್ಲ. ಕನ್ನಡದಂತೆ ಚೆನ್ನಾಗಿ ಬೆಳೆದಿರುವ ಭಾಷೆಗಳನ್ನು ಗ್ರಂಥಸ್ಥ (Cultivated Languages) ಎಂದೂ ಉಳಿದವುಗಳನ್ನು ಅಗ್ರಂಥಸ್ಥ (Uncultivated) ಎಂದೂ ಕರೆಯುತ್ತಾರೆ. ತುಳು ಸಹ ಕನ್ನಡದ ಉಪಭಾಷೆ. ಆದರೆ ಅದು ಕನ್ನಡದ ಇತರ ಉಪಭಾಷೆಗಳಿಗಿಂತ ಮುಂದುವರಿದಿದೆ.

ಯಾವ ಭಾಷೆಯೇ ಆಗಲಿ ಬಹಳ ಕಾಲದವರೆಗೆ ಇದ್ದಂತೆಯೇ ಇರುವುದಿಲ್ಲ. ಅದರಲ್ಲಿರುವ ಎಷ್ಟೋ ಅಂಶಗಳು ಕ್ರಮೇಣ ಬಿಟ್ಟುಹೋಗುವುದುಂಟು. ಮೇಲುಮು (ಹೊದಿಕೆ) ಮೆಳ್ಪಡು (ಮೋಸ ಹೋಗು) ಉಕ್ಕಿವ (ಮೋಸ) –ಅಜ್ಜಿಗ (ವ್ಯಥೆ)—ಇಂಥ ಎಷ್ಟೋ ಹಳೆಯ ಪದಗಳು ಹಿಂದೆ ಬಳಕೆಯಲ್ಲಿ ಇದ್ದವು. ಆದರೆ ಈಗ ಇಲ್ಲ. ಹಾಗೆಯೇ ಹಿಂದೆ ಇದ್ದ ಪದಗಳಲ್ಲಿ ಎಷ್ಟೋ ಪದಗಳು ಈಗ ಇದ್ದರೂ ರೂಪದಲ್ಲಿ ಮತ್ತು ಅರ್ಥದಲ್ಲಿ ಬದಲಾಗಿರುವುದು ಉಂಟು. ಹಳಗನ್ನಡದಲ್ಲಿ (ಎಂದರೆ ನೂರಾರು ವರ್ಷಗಳ ಹಿಂದಿನ ಕನ್ನಡದಲ್ಲಿ) ಇದ್ದ 'ಪಾಲ್' ಎನ್ನುವ ಪದ ಈಗ 'ಹಾಲು' ಆಗಿದೆ. 'ಪಸಿರ್' ಎಂಬ ಪದ 'ಹಸಿರು' ಆಗಿದೆ. 'ಪೆಣ್' ಎನ್ನುವುದು 'ಹೆಣ್ಣು' ಆಗಿದೆ. ಹಾಗೆಯೇ ಪೋಗು, ಪಿಡಿ, ಪಸಿವು, ಪತ್ತು ಮೊದಲಾದುವು ಹೋಗು, ಹಿಡಿ, ಹಸಿವು, ಹತ್ತು ಎಂಬ ರೂಪ ತಾಳಿವೆ. ಸಮೆ ಎನ್ನುವ ಪದಕ್ಕೆ ತಯಾರಿಸು, ನಿರ್ಮಿಸು ಎಂಬ ಅರ್ಥ ಇತ್ತು. ಈಗ ಆ ಪದಕ್ಕೆ ಸವೆಯುವುದು, ನಶಿಸುತ್ತ ಹೋಗುವುದು ಎಂಬ ಅರ್ಥ ಬಂದುಬಿಟ್ಟಿದೆ. ಎಷ್ಟೋ ಪದಗಳು ರೂಪ ಮತ್ತು ಅರ್ಥಗಳಲ್ಲಿ ಹೀಗೆ ಬದಲಾಗಿದ್ದರೆ ಇನ್ನೆಷ್ಟೋ ಪದಗಳು ಮೊದಲಿದ್ದಂತೆಯೇ ಉಳಿದು ಬಂದಿವೆ. ತೂಗು, ತೊಲಗು, ಕಿವಿ, ಕೈ—ಇವು ಅಂಥ ಪದಗಳು. ಒಟ್ಟಿನಲ್ಲಿ ಭಾಷೆ ಸದಾ ಒಂದೇ ರೀತಿಯಲ್ಲಿ ಇರುವುದಿಲ್ಲ. ಇದ್ದದ್ದು ಹೋಗುವುದುಂಟು, ಇಲ್ಲದ್ದು ಬರುವುದುಂಟು, ಇದ್ದದ್ದೇ ವ್ಯತ್ಯಾಸವಾಗಿ ಉಳಿಯುವುದುಂಟು.

ಕನ್ನಡ ಭಾಷೆ ಕಳೆದ ಒಂದು ಸಾವಿರ ವರ್ಷದಲ್ಲಿ ಬದಲಾವಣೆಯ ಎರಡು ಹಂತಗಳನ್ನು ಹಾದು ಬಂದಿದೆ. ಅವುಗಳನ್ನು ಕ್ರಮವಾಗಿ ಹಳಗನ್ನಡ

ಮತ್ತು ನಡುಗನ್ನಡ ಎಂದು ಕರೆಯುತ್ತಾರೆ. ಈಗ ನಾವು ಬಳಸುತ್ತಿರುವ ಕನ್ನಡ ಹೊಸಗನ್ನಡ. ಹಳಗನ್ನಡಕ್ಕೆ ಹಿಂದೆ ಇನ್ನೂ ಒಂದು ಹಂತ ಇತ್ತು ಎಂದು ಕೆಲವರು ವಿದ್ವಾಂಸರ ಅಭಿಪ್ರಾಯ. ಅದನ್ನು ಪೂರ್ವದ ಹಳಗನ್ನಡ ಎಂದು ಕರೆಯುತ್ತಾರೆ. ಅದರ ಕೆಲವು ಮಾತುಗಳನ್ನು ಹಿಂದಿನ ಶಾಸನಗಳಿಂದ ಆಯ್ದು ಕೆಳಗೆ ಕೊಟ್ಟಿದೆ. ಅವು ಹೀಗಿವೆ ನೋಡಿ.

ವಿತ್ತಿದಲ್ಲಿ ಪೆಳೆಯಾದೆ ಕೆಡುಗೆ
ಪಲ್ಮಡಿಗೆ ಕುರುಂಬಿಡಿವಿಟ್ಟಾರ್
ಅನೀ ಧರಣಿಯುಳ್ ಇರವಾನ್
ಇದಾನಳಿದೋನ್ ಮಹಾಪಾತಕನಕ್ಕುಮ್
ಕಳ್ವಪ್ಪಿನಾ ವೆಟ್ಟದುಳ್

ಈ ಮಾತುಗಳನ್ನು ಓದಿದಾಗ ತಮಿಳು ಭಾಷೆ ಸಹ ಇದರ ಹಾಗೆಯೇ ಇದೆ ಅನ್ನಿಸುತ್ತದೆ ಅಲ್ಲವೆ? ಪೂರ್ವದ ಹಳಗನ್ನಡದ ಕಾಲದಲ್ಲಿ ಈ ಎರಡು ಭಾಷೆಗಳಿಗೂ ಇದ್ದ ಸಂಬಂಧ ಅಷ್ಟು ಹತ್ತಿರದ ಸಂಬಂಧವಾಗಿತ್ತು. ಆಗಿನ ಕನ್ನಡ ಈ ಕಾಲಕ್ಕೆ ಎಷ್ಟು ಬದಲಾಗಿ ಹೋಗಿದೆಯೆಂದರೆ ಈಗಿನವರಿಗೆ ಹಳಗನ್ನಡದ ಗ್ರಂಥಗಳನ್ನು ಓದಿದರೆ ಸುಲಭವಾಗಿ ಅರ್ಥವೇ ಆಗುವುದಿಲ್ಲ.

ಕನ್ನಡ ಭಾಷೆಯು ಈವರೆಗೆ ಹಾದು ಬಂದ ನಾಲ್ಕು ಬೇರೆ ಬೇರೆ ಹಂತಗಳನ್ನು ಸುಮಾರಾಗಿ ಹೀಗೆ ತೋರಿಸಬಹುದು.

ಸುಮಾರು ೪೫೦ರಿಂದ ೮೦೦–ಪೂರ್ವದ ಹಳಗನ್ನಡ
ಸುಮಾರು ೮೦೦ರಿಂದ ೧೧೫೦–ಹಳಗನ್ನಡ
ಸುಮಾರು ೧೧೫೦ರಿಂದ ೧೮೫೦–ನಡುಗನ್ನಡ
ಸುಮಾರು ೧೮೫೦ರಿಂದ ಈಚೆಯದು–ಹೊಸಗನ್ನಡ

ಕೆಳಗೆ ಕೊಟ್ಟಿರುವ ನಾಲ್ಕು ಪಟ್ಟಿಗಳನ್ನು ನೋಡಿ. ನಮ್ಮ ಭಾಷೆ ಒಂದು ಸಾವಿರ ವರ್ಷದಲ್ಲಿ ಎಷ್ಟು ಬದಲಾಗಿದೆ ಎನ್ನುವುದನ್ನು ಅವು ಸ್ವಲ್ಪ ಮಟ್ಟಿಗೆ ತೋರಿಸಿಕೊಡಬಲ್ಲವು. ಮೊದಲನೆಯ ಪಟ್ಟಿಯಲ್ಲಿ ತೋರಿಸಿರುವ ಪದಗಳು ಸುಮಾರು ಸಾವಿರ ವರ್ಷಗಳ ಹಿಂದೆ ರೂಢಿಯಲ್ಲಿದ್ದ ಪದಗಳು. ಅವು ಈಗ ಬಳಕೆಯಿಂದ ಬಿಟ್ಟುಹೋಗಿವೆ. ಅಂಥ ಪದಗಳು ಎಷ್ಟೋ ಇವೆ. ಇಲ್ಲಿ ನಿದರ್ಶನಕ್ಕೆ ಕೆಲವನ್ನು ಮಾತ್ರ ತೋರಿಸಿದೆ. ಪದಗಳ ಮುಂದೆ ಅವುಗಳ ಅರ್ಥವನ್ನೂ ಕೊಟ್ಟಿದೆ.

ಶಬ್ದ	ಅರ್ಥ	ಶಬ್ದ	ಅರ್ಥ
ಅಳೆ	ಮಜ್ಜಿಗೆ	ಬಿರ್ದು	ಔತಣ
ಕೋೞ್	ಏಟು, ಹೊಡೆತ	ಬಿರ್ದಿನ	ಭೋಜನ, ಔತಣ
ಕೆಮ್ಮಗೆ	ಸುಮ್ಮನೆ	ಮೊಕ್ಕಳಂ	ಹೆಚ್ಚಾಗಿ
ಕೇಣ : ದ್ವೇಷ, ಮತ್ಸರ, ರೋಷ		ಮಿಳಿರ್	ಅಲುಗು, ಚಲಿಸು
ಕೆಯ್ಗೆಯ್	ಅಲಂಕರಿಸಿಕೊ	ಲೆಂಕ	ಸೇವಕ
ತೂಂಕು	ತಳ್ಳು	ಬೆಕ್ಕೆ	ಸಂತಾಪ
ಕಾಯ್ಪು	ಕೋಪ	ಮಾಣ್	ನಿಲ್ಲಿಸು, ತಡೆ
ಕಸವರ	ಚಿನ್ನದ ನಾಣ್ಯ	ಬಗಸಿರೆ	ಬೊಗಸೆ
ಕಲ್ಪಿ	ವಿದ್ಯೆ, ಕಲೆ	ಸೇದೆ	ಆಯಾಸ
ಗುಣ್ಪು	ಆಳ	ಮುಟ್ಟಿಗೆ	ಕೊಡತಿ
ಗಾವರ	ಧ್ವನಿ	ಸಂಬಳ	ಬುತ್ತಿ
ಟಿವಾಳ	ಮೋಸ	ಗುಡ್ಡ	ಶಿಷ್ಯ
ತಳರ್	ಹೊರಡು	ಸಾಂದು : ಸುಗಂಧ ದ್ರವ್ಯ (ಪುನುಗು)	
ತಗರ್	ಅಡ್ಡಗಟ್ಟು	ಸವಕಟ್ಟು	ಏರ್ಪಾಡು
ತಗುಳ್	ಸೇರು	ಮೆಳ್ಪಡು	ಮೋಸಹೋಗು
ತಂದಲ್	ಮಳೆ	ಮುಸುಂಬು : ಮುಸುಡು, ಮೂತಿ	
ತಿರುಡು	ಕದಿ	ಮದಿಲ್	ಗೋಡೆ
ನೀಡುಂ	ಬಹಳ	ಬೆಸೆ	ಗರ್ವಪಡು
ಪರದ	ವ್ಯಾಪಾರಿ	ಬಿದಿರ್	ಚದುರಿಸು
ಪಾಂಗು	ರೀತಿ	ಬವರ	ಯುದ್ಧ
ಪಣ್ಣು	ಮಾಡು		

ಮೇಲೆ ತೋರಿಸಿರುವ ಹಳಗನ್ನಡ ಪದಗಳು ಈಗ ಬಳಕೆಯಲ್ಲಿಯೇ ಇಲ್ಲ. ಕೆಳಗೆ ಇನ್ನೊಂದು ಪಟ್ಟಿ ಇದೆ. ಅದರಲ್ಲಿ ಹಿಂದೆಯೂ ಬಳಕೆಯಲ್ಲಿದ್ದು, ನಡುವೆ ಕೊಂಚ ಬದಲಾವಣೆ ಹೊಂದಿ ಇಂದಿಗೂ ಉಳಿದು ಬಂದಿರುವ ಪದಗಳು ಇವೆ.

ಶಬ್ದ	ಅರ್ಥ	ಶಬ್ದ	ಅರ್ಥ
ಇಱುಂಪೆ (ಇರುಂಪೆ)	ಇರುವೆ	ಬಿಲ್	ಬಿಲ್ಲು
ಕೞ್ತಿ (ಕಳ್ತಿ)	ಕತ್ತಿ	ದೆವಸ	ದಿವಸ
ಗೞ್ದೆ (ಗಳ್ದೆ)	ಗದ್ದೆ	ತಂಗೆ	ತಂಗಿ
ಕಣ್	ಕಣ್ಣು	ಪೊಣ್ಮು	ಹೊಮ್ಮು
ಕುಮ್ಮು	ಗುಮ್ಮು	ವಯಲ್	ಬಯಲು
ಕಡುಂಬು	ಕಡುಬು	ಸೆಱಪು (ಸೆರಪು)	ಚರ್ಪು (ಉತ್ಸವದ ಕಡೆಯಲ್ಲಿ ಹಂಚುವ ನೈವೇದ್ಯ)
ಜಿನುಂಗು	ಜಿನಗು		
ತೋಂಟಂ	ತೋಟ		
ದಾಂಟು	ದಾಟು	ಸಿಡುಂಬು	ಸಿಡುಬು
ನಿಲ್	ನಿಲ್ಲು	ಸಿಪ್ಪು	ಚಿಪ್ಪು
ಪರಕೆ	ಹರಕೆ	ಸಿಲ್ಕು	ಸಿಕ್ಕು
ಪೋಲ್	ಹೋಲು	ಅೞ್ಕಱ್ (ಅಳ್ಕರ್)	ಅಕ್ಕರೆ
ಮಣ್	ಮಣ್ಣು	ಅಳ್ಕು	ಅಳುಕು

ಇನ್ನೆಷ್ಟೋ ಹಳಗನ್ನಡ ಪದಗಳು ಅಂದಿನಿಂದ ಇಂದಿನವರೆಗೂ ತಮ್ಮ ರೂಪದಲ್ಲಿ ಕೊಂಚವೂ ಬದಲಾಗದೆ ಒಂದೇ ರೀತಿಯಲ್ಲಿ ಉಳಿದು ಬಂದಿವೆ. ಅವುಗಳಿಗೆ ಕೆಲವು ಉದಾಹರಣೆಗಳು ಕೆಳಗಿವೆ. ಅಗತ್ಯವಾದ ಪದಗಳಿಗೆ ಮಾತ್ರ ಅರ್ಥ ಕೊಟ್ಟಿದೆ.

ಅಪ್ಪು	ನಡುಗು
ಆಲಿ (ಕಣ್ಣುಗುಡ್ಡೆ)	ನಡೆ
ಇಡು	ನುಡಿ
ಇಟ್ಟಿಗೆ	ಮುಡಿ
ಎಡೆ (ಸ್ಥಳ)	ಮುನಿ
ಓಡು	ಮೂದಲಿಸು (ಹೀಯಾಳಿಸು)
ಒಪ್ಪು	ಮೆಚ್ಚು
ಕೊಂಕು	ಮಡಿ
ಕೊಂಬು	ಮೇರೆ

ಕವಿ (ಮುತ್ತು)	ಸಿಗ್ಗು (ನಾಚಿಕೆ)
ಕಿಡಿ	ಸಟ್ಟುಗ (ಸೌಟು)
ಚಿಕ್ಕೆ (ನಕ್ಷತ್ರ)	ಸೈರಿಸು
ತಪ್ಪು	ಸುಡು

ಕೆಲವು ಹಳೆಯ ಪದಗಳು ಸ್ವಲ್ಪ ಬದಲಾಗಿ ಉಳಿದುಬಂದಿರುವುದನ್ನು ನೋಡಿದೆವಷ್ಟೆ. ಈ ಬದಲಾವಣೆ ನಡೆಯುವುದು ಪದದ ರೂಪದಲ್ಲಿ ಮಾತ್ರವಲ್ಲ. ಅದರ ಅರ್ಥ ಸಹ ಬದಲಾಗುವುದು ಸಾಧ್ಯ. ಎಂದರೆ ಒಂದು ಪದಕ್ಕೆ ಹಿಂದೆ ಇದ್ದ ಅರ್ಥ ಮರೆಯಾಗಿ ಹೊಸ ಅರ್ಥ ಬಂದಿರುವುದೂ ಉಂಟು. ಕೆಲವು ನಿದರ್ಶನಗಳನ್ನು ನೋಡಿ.

ಪದ	ಹಿಂದೆ ಇದ್ದ ಅರ್ಥ	ಈಗಿನ ಅರ್ಥ
ಜಡಿ	ಗದರಿಸು	ಹೊಡೆ
ಅವಸರ	ಸಂದರ್ಭ	ಗಡಿಬಿಡಿ, ತರಾತುರಿ
ಓಜ	ಉಪಾಧ್ಯಾಯ	ಶಿಲ್ಪಿ
ಅಗ್ಗ	ಶ್ರೇಷ್ಠವಾದ	ಕಡಮೆಯಾದ
ನಾತ	ಪರಿಮಳ	ಕೆಟ್ಟವಾಸನೆ
ಮಾಣಿ	ಬ್ರಹ್ಮಚಾರಿ	ಹೋಟೆಲಿನಲ್ಲಿ ಲೋಟ ತೊಳೆಯುವವನು
ಕೂಟು (ಕೂಳ್)	ಅನ್ನ	ಕೆಳಗಿನವರಿಗೆ ಹಾಕುವ ಅನ್ನ
ಕೂಸು	ಹುಡುಗಿ	ಮಗು
ಸೀರೆ	ವಸ್ತ್ರ	ಹೆಂಗಸರು ತೊಡುವ ವಸ್ತ್ರ
ಕುಪ್ಪಸ	ಕವಚ	ಹೆಂಗಸರು ತೊಡುವ ಎದೆವಸ್ತ್ರ
ಪಸಪ	ಚೀಲ	ಹಜಾಮನ ಪೆಟ್ಟಿಗೆ
ಅಮ್ಮ	ಅಪ್ಪ	ತಾಯಿ

ಭಾಷೆ ಕಾಲದಿಂದ ಕಾಲಕ್ಕೆ ಬದಲಾಗುವುದು ಮಾತ್ರವೇ ಅಲ್ಲ. ಒಂದೇ ಕಾಲದಲ್ಲಿಯೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ಬದಲಾಗುತ್ತದೆ. ಧಾರವಾಡದವರು ಮಾತನಾಡುವ ಕನ್ನಡಕ್ಕೂ ಮೈಸೂರಿನವರು ಮಾತನಾಡುವ ಕನ್ನಡಕ್ಕೂ ಎದ್ದು ಕಾಣುವಷ್ಟು ವ್ಯತ್ಯಾಸ ಇದೆ. ಹಾಗೆಯೇ ಮಂಗಳೂರಿನ ಜನ ಆಡುವ ಕನ್ನಡಕ್ಕೂ, ಧಾರವಾಡ ಮೈಸೂರು ಗಳಲ್ಲಿನ ಜನ ಆಡುವ ಕನ್ನಡಗಳಿಗೂ ವ್ಯತ್ಯಾಸವಿದೆ. ಕರ್ನಾಟಕದಲ್ಲಿ ಈಗ ಬಳಕೆಯಲ್ಲಿರುವ ಕನ್ನಡವನ್ನು ಮೈಸೂರು ಕನ್ನಡ, ಧಾರವಾಡ ಕನ್ನಡ ಮತ್ತು ಮಂಗಳೂರು ಕನ್ನಡ ಎಂದು ಮೂರು ಮುಖ್ಯ ಭಾಗಗಳಾಗಿ ವಿಂಗಡಿಸ ಬಹುದು. ಇವುಗಳಲ್ಲಿರುವ ವ್ಯತ್ಯಾಸಕ್ಕೆ ಕಾರಣವೆಂದರೆ ಇವುಗಳನ್ನಾಡುವ ಜನರು ಈ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುತ್ತಿರುವುದು. ಆದ್ದರಿಂದ ಇವುಗಳನ್ನು ಕನ್ನಡದ ಪ್ರಾದೇಶಿಕ ಪ್ರಭೇದಗಳು ಎಂದು ಕರೆಯುತ್ತಾರೆ.

ಈ ಪ್ರಾದೇಶಿಕ ಪ್ರಭೇದಗಳಿಗೆ ಇರುವ ವ್ಯತ್ಯಾಸ ಒಮ್ಮೊಮ್ಮೆ ಯಾವ ಮಟ್ಟಕ್ಕೆ ಹೋಗುತ್ತದೆ ಎನ್ನಲು ಒಂದೆರಡು ಉದಾಹರಣೆ ನೋಡಬಹುದು. ಒಂದೇ ಪದಕ್ಕೆ ಧಾರವಾಡದಲ್ಲಿ ಒಂದು ಅರ್ಥ, ಮೈಸೂರು ಕಡೆ ಇನ್ನೊಂದು ಅರ್ಥ ಇರುವುದುಂಟು.

'ತಿಂಡಿ' ಎನ್ನುವ ಪದ ನೀವು ಕೇಳಿದ್ದೀರಿ. ಮೈಸೂರಿನ ಕಡೆಯವರಾಗಿದ್ದಲ್ಲಿ ತಿಂಡಿ ನಿಮಗೆ ತುಂಬ ಪ್ರಿಯವಾದ ವಸ್ತುವೂ ಹೌದು. ಅಷ್ಟೇ ಅಲ್ಲ, ನೀವು ದಿನವೂ ಅದನ್ನು ತಿನ್ನುತ್ತಲೂ ಇರಬಹುದು. ಆದರೆ ಧಾರವಾಡದ ಕಡೆಯ ಕನ್ನಡಿಗರಿಗೆ 'ತಿಂಡಿ' ತಿನ್ನುವ ವಸ್ತು ಖಂಡಿತ ಅಲ್ಲ. ಮೈಸೂರಿನ ಜನ ತಿಂಡಿ ತಿನ್ನುತ್ತಾರೆ ಎಂದರೆ ಅವರಿಗೆ ಗಾಬರಿಯಾಗುವುದು ಏಕೆ ಗೊತ್ತೆ ? ಅವರ ಮಾತಿನಲ್ಲಿ ತಿಂಡಿ ಎಂದರೆ ಕಡಿತ, ತುರಿಕೆ ಅಂತ ಅರ್ಥ. ಮೈಸೂರಿನ ಒಬ್ಬರು ಹಿರಿಯರು ಈ ವಿಷಯವನ್ನು ಕುರಿತು ಹಾಸ್ಯವಾಗಿ ಹೀಗೆ ಹೇಳುತ್ತಿದ್ದುದನ್ನು ನಾನು ಬಲ್ಲೆ. "ನಮ್ಮ ತಿಂಡಿಯನ್ನು ನಾವೇ ತಿನ್ನುತ್ತೇವೆ. ಆದರೆ ಧಾರವಾಡದ ವಿಷಯ ಹಾಗಲ್ಲ. ಅಲ್ಲಿ ತಿಂಡಿಯೇ ಜನರನ್ನು ತಿನ್ನುತ್ತದೆ!"

ಕಾವಲಿ ಎಂಬ ಇನ್ನೊಂದು ಪದದ ವಿಷಯವೂ ಹೀಗೆಯೇ. ಅದಕ್ಕೂ ಒಂದೊಂದು ಪ್ರದೇಶದಲ್ಲಿ ಒಂದೊಂದು ಅರ್ಥ. ನಮ್ಮ ಮನೆಗಳಲ್ಲಿ ಕಾವಲಿ

ಯನ್ನು ಒಲೆ ಮೇಲಿಟ್ಟು ದೋಸೆ ಹೊಯ್ಯುತ್ತಾರೆ. ಚಪಾತಿ, ರೊಟ್ಟಿ ಇತ್ಯಾದಿ ಮಾಡುತ್ತಾರೆ. ಆದರೆ 'ಕಾವಲಿಗೆ ದೋಸೆ ಹಾಕುವ' ಮಾತು ಧಾರವಾಡದವರಿಗೆ ವಿಚಿತ್ರ ಎನ್ನಿಸಬಹುದು, "ತಿನ್ನಬೇಕಾದ ದೋಸೆಯನ್ನು ಗಟಾರಕ್ಕೆ ಹಾಕುವುದು ಎಂದರೆ ಏನರ್ಥ ? ಎಲ್ಲಾದರೂ ಉಂಟೆ ?" ಎಂದಾರು. ಅವರ ಮಾತಿನಲ್ಲಿ ಕಾವಲಿ ಎಂದರೆ ಚರಂಡಿ ಎಂದು ಅರ್ಥ. ಧಾರವಾಡದವರಾದ ಕವಿ ಬೇಂದ್ರೆಯವರು ತಮ್ಮ ಒಂದು ಕವನದಲ್ಲಿ "ಬೀಡಾಡಿ ನಾಯಿಗೆ ಬೀದಿಗಾವಲಿ ನೀರು" ಎಂದು ಬರೆದಿದ್ದಾರೆ. ನೆಲೆಯಿಲ್ಲದ ನಾಯಿಗೆ ಕುಡಿಯಲು ಸಿಗುವುದು ಬೀದಿಗಾವಲಿಯ(ಎಂದರೆ ಬೀದಿ ಚರಂಡಿಯ) ನೀರು ಎಂದು ಈ ಮಾತಿನ ಅರ್ಥ. ಧಾರವಾಡದಲ್ಲಿ ದೋಸೆ ಹೊಯ್ಯಲು ಬಳಸುವ ಕಾವಲಿಗೆ ಕಾಲುವೆ ಎಂದು ಹೆಸರು. ಮೈಸೂರಿನಲ್ಲಿ ಕಾಲುವೆಗೆ ನೀರು ಹರಿಯುವ ಒಂದು ಪಾತ್ರೆ ಎಂದು ಅರ್ಥ !

ಒಮ್ಮೆ ಧಾರವಾಡದವರೊಬ್ಬರು ಯಾವುದೋ ಕೆಲಸಕ್ಕಾಗಿ ಮೈಸೂರಿಗೆ ಹೋಗಿದ್ದರು. ಅಲ್ಲಿ ತಮ್ಮ ಪರಿಚಿತರಾದ ಒಬ್ಬರ ಮನೆಗೆ ಹೋದರು. ಮನೆಯವರು ಅವರನ್ನು ಕಂಡಕೂಡಲೆ "ಏನು ಸ್ವಾಮಿ ಅಪರೂಪಕ್ಕೆ ಬಂದಿರಿ. ಬನ್ನಿ ಕುಳಿತುಕೊಳ್ಳಿ. ಎಲ್ಲ ಕ್ಷೇಮ ತಾನೆ ? ಕಮಲಮ್ಮ ಹೇಗಿದ್ದಾರೆ?" ಎಂದರಂತೆ. ಬಂದಿದ್ದವರಿಗೆ ರೇಗಿ ಹೋಯಿತು. "ಯಾಕ್ರೀ ನಿಮ್ಮ ಮನೆಗೆ ಬಂದೆ ಅಂತ ನನ್ನನ್ನು ಸನ್ಯಾಸಿ ಮಾಡಬಹುದೆ ? ನನ್ನ ಮಗಳು ಕಮಲನನ್ನ ವಿಧವೆ ಅನ್ನಬಹುದೆ ?" ಎಂದು ಕೇಳಿದರಂತೆ. ಧಾರವಾಡದ ಕಡೆ 'ಸ್ವಾಮಿ' ಎಂದರೆ ತಲೆ ಬೋಳಿಸಿಕೊಂಡ ಸನ್ಯಾಸಿ ಎಂಬ ಅರ್ಥ ಇದೆ. 'ಅಮ್ಮ' ಎಂದರೆ ಅಲ್ಲಿ ವಿಧವೆ. ಮೈಸೂರಿನ ತಡೆ ಅಮ್ಮ ಎನ್ನುವುದು ಗೌರವ ಸೂಚಕ ಪದ. ಹೆಂಗಸರ ಹೆಸರಿಗೆ ಅದನ್ನು ಸೇರಿಸುವುದು ರೂಢಿ. ಗೌರಮ್ಮ, ಸರೋಜಮ್ಮ, ಲಲಿತಮ್ಮ, ಮಣಿಯಮ್ಮ ಎಂಬ ಹೆಸರುಗಳು ಇಲ್ಲಿ ಸಾಮಾನ್ಯ.

ಹೀಗೆಯೇ ಮಂಗಳೂರಿನ ಕನ್ನಡ ಧಾರವಾಡದವರಿಗೆ ಮತ್ತು ಕನ್ನಡಿ ಗರಿಗೆ ತೊಡಕಾಗುವುದೂ ಉಂಟು. ಅಲ್ಲಿ ಪಂಚಾಂಗ ಎಂದರೆ ಮನೆ ಕಟ್ಟುವ ಮುಂಚೆ ಹಾಕುವ ತಳಪಾಯ. ರವೆ ಎಂದರೆ ಬೆಲ್ಲದ ದ್ರವ ಅಥವಾ ಪಾಕ. ಮೆಣಸು ಎಂದರೆ ಮೆಣಸಿನಕಾಯಿ. ಚಿಮಣಿ ಎಣ್ಣೆ ಎಂದರೆ ಸೀಮೆ ಎಣ್ಣೆ. ಮಾತುಗಳಲ್ಲಿ ಇಷ್ಟು ವ್ಯತ್ಯಾಸವಿರುವಾಗ ಮೈಸೂರಿನವರೋ ಧಾರವಾಡ



ನನ್ನದು [illegible] ಅಲ್ಲವಾದರೆ ? ನನ್ನ [illegible] [illegible] ಅಲ್ಲವಾದರೆ ?

ದವರೋ ಮಂಗಳೂರು ಪ್ರದೇಶದಲ್ಲಿ ವಾಸಮಾಡಲು ಹೋದರೆ ಆರಂಭದಲ್ಲಿ ಸ್ವಲ್ಪ ಪೇಚಾಟವೇ ಆಗುತ್ತದೆ. ಧಾರವಾಡ ಮೈಸೂರುಗಳಿಗೆ ಬಂದ ಮಂಗಳೂರಿನವರ ಪರಿಸ್ಥಿತಿಯೂ ಅದೇ. ಈ ಸಂಬಂಧದಲ್ಲಿ ಒಂದು ಸ್ವಾರಸ್ಯಕರವಾದ ಕಥೆ ಇದೆ.

ಒಮ್ಮೆ ಮಂಗಳೂರಿನ ಕಡೆಯ ಅಧ್ಯಾಪಕರೊಬ್ಬರಿಗೆ ಮೈಸೂರಿಗೆ ವರ್ಗವಾಯಿತು. ಹೊಸ ಸ್ಕೂಲಿಗೆ ಬಂದು ಒಂದೆರಡು ದಿನ ಆಗಿತ್ತಷ್ಟೆ. ಒಮ್ಮೆ ಅವರು ಅಧ್ಯಾಪಕ ಕೊಠಡಿಯಲ್ಲಿ ಕುಳಿತಿರುವಾಗ ಹೆಡ್‌ಮಾಸ್ಟರರ ಜವಾನ ಬಂದು "ಸಾಯೇಬ್ರು ಕೂಗ್ತವ್ರೆ, ಬೇಗ ಬರಬೇಕಂತೆ" ಎಂದ. ಅಧ್ಯಾಪಕರಿಗೆ ಗಾಬರಿಯಾಯಿತು. ಹೆಡ್‌ಮಾಸ್ಟರರು ಏಕೆ ಕೂಗಿಕೊಳ್ಳುತ್ತಿರಬಹುದು ? ಏನು ಅಪಾಯ ಸಂಭವಿಸಿರಬಹುದು ? ಎಂದು ಭಯಪಡುತ್ತ ಅವರ ಕೊಠಡಿಗೆ ಓಡಿಕೊಂಡೇ ಹೋದರು. ಅಲ್ಲಿ ನೋಡಿದರೆ ಹೆಡ್‌ಮಾಸ್ಟರರು ಶಾಂತವಾಗಿ ಕುಳಿತಿದ್ದಾರೆ ! ಓಡಿ ಬಂದ ಈ ಅಧ್ಯಾಪಕರನ್ನು ನೋಡಿ ಹೆಡ್‌ಮಾಸ್ಟರರಿಗೆ ಭಯವಾಯಿತು. 'ಏಕೆ ಇವರು ಹೀಗೆ ಓಡಿ ಬರುತ್ತಿದ್ದಾರೆ. ಹುಡುಗರು ಏನಾದರೂ ಕಿತಾಪತಿ ಮಾಡಿರಬಹುದೆ ? ಹೊಸ ಅಧ್ಯಾಪಕರು ಎಂದು ಆಟ ಆಡಿಸಿರಬಹುದೆ ?' ಇತ್ಯಾದಿ ಆಲೋಚನೆ ಅವರ ತಲೆಯಲ್ಲಿ ಸುಳಿದವು. ಈ ಗಲಿಬಿಲಿಗೆ ಕಾರಣವೇನೆಂದು ತಿಳಿದ ಮೇಲೆ ಮಾತ್ರ ಇಬ್ಬರೂ ಹೊಟ್ಟೆ ಹುಣ್ಣಾಗುವಷ್ಟು ನಕ್ಕರು. ಆದದ್ದು ಇಷ್ಟೆ: ಮಂಗಳೂರ ಕಡೆ ಕೂಗುವುದು ಎಂದರೆ ಅಳುವುದು ಎಂದರ್ಥ. ಮೈಸೂರಿನ ಕಡೆ ಅದಕ್ಕೆ ಕರೆಯುವುದು ಎಂದು ಅರ್ಥ. ಸಾಹೇಬರು ಕೂಗುತ್ತಿದ್ದಾರೆ ಎಂದು ಜವಾನ ತಿಳಿಸಿದನಷ್ಟೆ. ಅಧ್ಯಾಪಕರು ಅದನ್ನು ಕೇಳಿ ಹೆಡ್‌ಮಾಸ್ಟರರು ಅಳುತ್ತಿದ್ದಾರೆ ಎಂದು ಅರ್ಥಮಾಡಿಕೊಂಡಿದ್ದರು. ಆದರಿಂದಲೇ ಅವರು ಹಾಗೆ ಓಡಿ ಬಂದದ್ದು.

ಈ ಪ್ರಾದೇಶಿಕ ವ್ಯತ್ಯಾಸಗಳ ಪ್ರಮಾಣ ಹಿಂದೆ ಹೆಚ್ಚಾಗಿತ್ತು. ಅದಕ್ಕೆ ಕಾರಣ, ಧಾರವಾಡ ಮತ್ತು ಮಂಗಳೂರು ಪ್ರದೇಶಗಳು ಬೇರೆ ಪ್ರಾಂತ್ಯಗಳ ಆಡಳಿತಕ್ಕೆ ಸೇರಿದ್ದವು. ಈ ಪ್ರದೇಶಗಳ ಜನರಿಗೆ ಪರಸ್ಪರ ಸಂಪರ್ಕ ಅಷ್ಟಾಗಿ ಇರಲಿಲ್ಲ. ಆದರೆ ಇವುಗಳೆಲ್ಲ ಒಟ್ಟಾಗಿ ಕರ್ನಾಟಕ ರಾಜ್ಯ ರೂಪುಗೊಂಡ ಮೇಲೆ ಸಂಬಂಧ ಮತ್ತು ಸಂಪರ್ಕ ಹೆಚ್ಚಾಯಿತು. ಫಲವಾಗಿ ಈ ವ್ಯತ್ಯಾಸಗಳೂ ಈಗ ಕಡಿಮೆಯಾಗುತ್ತಿವೆ. ಒಂದು ಪ್ರದೇಶದವರ

ಮಾತು ಇನ್ನೊಂದು ಪ್ರದೇಶದವರಿಗೆ ಅರ್ಥವಾಗುವುದು ಈಗ ಅಷ್ಟು ಕಷ್ಟ ವಲ್ಲ ಎನ್ನಬಹುದು

ಕೆಳಗೆ ಧಾರವಾಡ ಮಂಗಳೂರು ಮತ್ತು ಮೈಸೂರುಗಳಿಗೆ ವಿಶಿಷ್ಟವಾದ ಕೆಲವು ಪದಗಳ ಚಿಕ್ಕ ಪಟ್ಟಿಗಳನ್ನು ಕೊಟ್ಟಿದೆ. ಅವು ಆಯಾ ಪ್ರದೇಶಗಳಲ್ಲಿಯೇ ವಿಶೇಷವಾಗಿ ಬಳಕೆಯಾಗುವ ಪದಗಳು. ಉಳಿದ ಪ್ರದೇಶಗಳ ಜನರಿಗೆ ಅವು ಸುಲಭವಾಗಿ ತಿಳಿಯುವುದಿಲ್ಲ.

ಧಾರವಾಡ ಪ್ರದೇಶದಲ್ಲಿ ಬಳಕೆಯಲ್ಲಿರುವ ಕೆಲವು ಶಬ್ದಗಳು

ಪದ	ಅರ್ಥ	ಪದ	ಅರ್ಥ
ಲಿಲಾವು	ಹರಾಜು	ಸವಡು	ಅವಕಾಶ
ಕಾಳಜಿ	ಚಿಂತೆ (concern)	ಸುರಳೀತ	ಸಲೀಸು
ಇಟ್ಟಂಗಿ	ಇಟ್ಟಿಗೆ	ಖೋಲಿ	ಕೊಠಡಿ
ಧಬಧಬೆ	ಜಲಪಾತ	ಟಬರು	ಸೊಕ್ಕು
ದಗದ	ಕೆಲಸ	ಗೊಂಗಡಿ	ಕಂಬಳಿ
ಗುಳದಾಳಿ	ಮಂಗಳಸೂತ್ರ	ಗೋಪಾಳ	[illegible]
ಗುನ್ಹೆ	ಅಪರಾಧ	ತೋಂಡಿ	ಮೌಖಿಕ
ಪಡತಾಕು	ಅಪ್ಪಾಡು	ಖಬರ	ತಿಳಿವು
ಇರಾದೆ	ಉದ್ದೇಶ	ಅಗದಿ	ತೀರ
ಅಮಲು	ಅಧಿಕಾರದ ಮದ	ತಳಕು	ತೊಡಕು, ಸಂಬಂಧ
ದರಕಾರ	ಲಕ್ಷ್ಯ	ಟೋಳಿ	ಗುಂಪು

ಮಂಗಳೂರು ಪ್ರದೇಶದಲ್ಲಿ ಬಳಕೆಯಲ್ಲಿರುವ ಕೆಲವು ಶಬ್ದಗಳು

ಪದ	ಅರ್ಥ	ಪದ	ಅರ್ಥ
ಅಕ್ಕಚ್ಚು	ಅಕ್ಕಿ ತೊಳೆದ ನೀರು	ಮೋರಿ	ನಾಗಸ್ವರ, ಓಲಗ
ಕುಪಾಟಿ	ಇಷ್ಟೊಂದು	ಮುಂಡಿಯುದು	ಬಾರದು
ಎಡೆ	ಉಣ್ಣುವ ಎಲೆ	ಪರಾತ	[illegible]

ಪದ	ಅರ್ಥ	ಪದ	ಅರ್ಥ
ಏಲಂ	ಲಿಲಾವು, ಹರಾಜು	ವಿಲೇವಾರಿ	ಏರ್ಪಾಟು
ಐನು	ಮುಖ್ಯ	ಮರಿಗೆ	ಬಾನಿದೋಣಿ, ಮರದಪಾತ್ರೆ
ನಸ್ರಾಣಿ	ಕತೆಕರೆ ಮಾಡುವ ವ್ಯಕ್ತಿ		
ನೆಸೆ	ಸಲಿಗೆ	ಬಾಯರು	ದನಗಳಿಗೆ ಕೊಡುವ ಪಾನೀಯ
ಪಸಂದ	ಚೆಂದ		
ಪಂಚಾಂಗ	ಪಾಯ	ಬೇರೇಜು	ಕಂದಾಯ ತರುವ ಭೂಮಿ
ಪ್ರಸಂಗ	ಯಕ್ಷಗಾನದ ಕಥಾನಕ		
ಬಚ್ಚು	ಬಡವಾಗು	ಸೀಯಾಳ	ಎಳನೀರು
ಬೊಜ್ಜ	ಉತ್ತರಕ್ರಿಯೆ	ಹೂಟೆ	ಉಳುಮೆ
ಬೋಗುಣಿ	ಒಂದು ಪಾತ್ರೆ	ಹೆಳೆ	ನೆಪ
ಬುರ್ನಾಸು	ವ್ಯರ್ಥ	ಹಾಡಿ	ಚಿಕ್ಕ ಕಾಡು
ಬಿದ್ದಿನವ	ನೆಂಟ	ಸಂಕ	ಸೇತುವೆ
ಬಲ್ಲೆ	ಪೊದೆ	ಹೊಯಿಗೆ	ಮರಳು

ಒಂದು ಭಾಷೆಯಲ್ಲಿರುವ ಪದಗಳ ಹೊರ ರೂಪ ಮಾತ್ರವಲ್ಲ, ಅವುಗಳ ಅರ್ಥವೂ ವ್ಯತ್ಯಾಸವಾಗುತ್ತಿರುತ್ತದೆ. ಹಾಗೆ ಅರ್ಥವ್ಯತ್ಯಾಸ ಆಗಿರುವುದಕ್ಕೆ ಒಂದೆರಡು ಕನ್ನಡ ಶಬ್ದಗಳ ಉದಾಹರಣೆಯನ್ನು ಅರಂಭದಲ್ಲಿಯೇ ನೋಡಿದಿರಿ. ಒಮ್ಮೆ ಬಡವನಾಗಿದ್ದ ವ್ಯಕ್ತಿ ಶ್ರೀಮಂತನಾಗಬಹುದು. ಶ್ರೀಮಂತ ಬಡವನಾಗಬಹುದು. ಅಥವಾ ಅವನ ಸ್ಥಿತಿಗತಿಗಳಲ್ಲಿ ಬೇರೆ ಏನಾದರೂ ಬದಲಾವಣೆಯಾಗಬಹುದು. ಹಾಗೆಯೇ ಪದಗಳೂ ಹೀನ ಅರ್ಥದಿಂದ ಉತ್ತಮ ಅರ್ಥಕ್ಕೆ, ಉತ್ತಮ ಅರ್ಥದಿಂದ ಹೀನ ಅರ್ಥಕ್ಕೆ, ಮಿತ ಅರ್ಥದಿಂದ ವಿಸ್ತಾರವಾದದ್ದಕ್ಕೆ, ವಿಸ್ತಾರವಾದ ಅರ್ಥದಿಂದ ಮಿತವಾದದ್ದಕ್ಕೆ ಚಲಿಸುವುದುಂಟು. ಉದಾಹರಣೆಗೆ ಇಂಗ್ಲಿಷಿನಲ್ಲಿರುವ Wife ಎಂಬ ಪದಕ್ಕೆ ಈಗ 'ಹೆಂಡತಿ' ಎಂಬ ಅರ್ಥವಿದೆ. ಹಿಂದೆ ಅದಕ್ಕಿದ್ದ ಅರ್ಥ 'ಹೆಂಗಸು' ಎನ್ನುವುದು. ಒಬ್ಬ ಹೆಂಗಸು ಎಲ್ಲರ ಪಾಲಿಗೂ ಕೇವಲ ಹೆಂಗಸೆ. ಆದರೆ ಒಬ್ಬನಿಗೆ ಮಾತ್ರ ಅವಳು ಹೆಂಡತಿ ! ಎರಡಕ್ಕೂ ಎಷ್ಟೊಂದು ವ್ಯತ್ಯಾಸ ಇದೆ

ಅಲ್ಲವೆ ? ಇಂಗ್ಲಿಷಿನ Fame ಎಂಬ ಶಬ್ದವನ್ನು ಹಿಂದೆ 'ಸುದ್ದಿ' ಎಂಬ ಅರ್ಥದಲ್ಲಿ ಬಳಸುತ್ತಿದ್ದರು. ಕ್ರಮೇಣ ಅದು ಕೀರ್ತಿ ಎಂಬ ಅರ್ಥಕ್ಕೆ ಹೊರಳಿತು. Holiday ಎಂದರೆ ಪವಿತ್ರವಾದ ದಿನ, ಹಬ್ಬದ ದಿನ. ಹಬ್ಬದ ದಿನಗಳಲ್ಲಿ ರಜಾ ಸಿಗುತ್ತಿದ್ದುದರಿಂದ ರಜದ ದಿನಗಳಿಗೆಲ್ಲ Holiday ಎಂಬ ಪದ ಹೊಂದಿಕೊಂಡುಬಿಟ್ಟಿತು. Meat ಎನ್ನುವ ಶಬ್ದ ಆಹಾರಕ್ಕೆಲ್ಲ ಅನ್ವಯವಾಗುತ್ತಿದ್ದದ್ದು ಈಗ ಮಾಂಸ ಎಂಬ ಅರ್ಥವನ್ನು ಮಾತ್ರ ಕೊಡುತ್ತಿದೆ. ಸಂಸ್ಕೃತದ 'ದುಹಿತಾ' ಎಂಬ ಪದವನ್ನು ನೀವು ಕೇಳಿರಬಹುದು. ಹಾಲು ಕರೆಯುವವಳಿಗೆ ಇದ್ದ ಹೆಸರು ಅದು. ಕ್ರಮೇಣ ಅದಕ್ಕೆ ಮಗಳು ಎಂಬ ಅರ್ಥ ಬಂದುಹೋಯಿತು. 'ಜಾರ' ಎಂಬ ಇನ್ನೊಂದು ಸಂಸ್ಕೃತ ಪದಕ್ಕೆ ಅನೇಕ ಹೆಣ್ಣುಗಳಲ್ಲಿ ಆಸಕ್ತನಾದವನು. ಪೋಲಿ ಎಂಬ ಕೆಟ್ಟ ಅರ್ಥ ಇದೆ. ಹಿಂದೆ ಅದು ಪ್ರೇಮಿಗೆ ಮಾತ್ರ ಅನ್ವಯವಾಗುತ್ತಿತ್ತು ! ನಮ್ಮ ನೆರೆ ಭಾಷೆಯಾದ ತೆಲುಗಿನ 'ಪೆದ್ದ' ಎಂಬ ಪದವನ್ನೇ ನೋಡಿ. ತೆಲುಗಿನಲ್ಲಿ ಅದಕ್ಕೆ ದೊಡ್ಡ, ಹಿರಿಯ ಎಂಬ ಅರ್ಥ ಇದೆ. 'ಪೆದ್ದ ಮನುಷ್ಯ' ಎಂದರೆ ಅಲ್ಲಿ ದೊಡ್ಡ ಮನುಷ್ಯ, ಅವನಿಗೆ ಎಲ್ಲ ಗೌರವ ಕೊಡುವವರೇ. ಆದರೆ ಅದೇ ಪದ ಕನ್ನಡದಲ್ಲಿ ತೀರ ಬೇರೆ ಅರ್ಥಕ್ಕೆ ಹೊರಳಿಬಿಟ್ಟಿದೆ. ನಮ್ಮ 'ಪೆದ್ದ ಮನುಷ್ಯ' ಎಂದಿಗೂ ದೊಡ್ಡ ಮನುಷ್ಯನಾಗಲು ಸಾಧ್ಯವಿಲ್ಲ ! ಅವನನ್ನು ಎಲ್ಲ ಗೇಲಿ ಮಾಡುವವರೇ.

ಒಂದು ಭಾಷೆಗೆ ಇತರ ಯಾವುದಾದರೂ ಭಾಷೆಯ ಪದಗಳು ಕಾಲಕಾಲಾಂತರದಿಂದ ಸೇರುವುದುಂಟು. ಹಾಗೆ ಸೇರಿದ ಪದಗಳು ಮೊದಲಿನ ಅರ್ಥದಲ್ಲಿಯೇ ಸಾಮಾನ್ಯವಾಗಿ ಬಳಕೆಯಾಗುತ್ತವೆ. ಆದರೆ ಒಮ್ಮೊಮ್ಮೆ ಅವು ತಮ್ಮ ಅರ್ಥವನ್ನು ಬದಲಿಸಿಕೊಳ್ಳುವುದೂ ಉಂಟು. ಸಂಸ್ಕೃತದಿಂದ ಕನ್ನಡಕ್ಕೆ ಬಂದ ಭದ್ರ, ವರ್ತಮಾನ, ಆಗ್ರಹ, ಮರ್ಯಾದೆ, ಪ್ರಾಯ – ಇತ್ಯಾದಿ ಪದಗಳಿಗೆ ಸಂಸ್ಕೃತದಲ್ಲಿರುವ ಅರ್ಥವೇ ಬೇರೆ; ಇಲ್ಲಿ ಅವು ಪಡೆದುಕೊಂಡಿರುವ ಅರ್ಥವೇ ಬೇರೆ. ಸಂಸ್ಕೃತದಲ್ಲಿ ಆಗ್ರಹ ಎಂದರೆ ಹಠ. ಆದರೆ ಆ ಶಬ್ದವನ್ನು ನಾವು ಬಲಾತ್ಕಾರ ಎಂಬ ಅರ್ಥದಲ್ಲಿ ಬಳಸುತ್ತಿದ್ದೇವೆ. ಸಭಿಕ ಎಂದರೆ ಅಲ್ಲಿ ಜೂಜುಗಾರ. ಕನ್ನಡದಲ್ಲಿ ಅದೇ ಶಬ್ದಕ್ಕೆ ಸಭೆಯಲ್ಲಿ ಕುಳಿತಿರುವವನು ಎಂಬ ಒಳ್ಳೆಯ ಅರ್ಥ ಬಂದುಬಿಟ್ಟಿದೆ. ಮರ್ಯಾದೆ ಎಂದರೆ ಮುಖ್ಯವಾಗಿ ಗಡಿ, ಮಿತಿ ಎಂದು ಅರ್ಥ. ದೇಶದ ಗಡಿಗೆ ಸಹ ಮರ್ಯಾದೆ ಎಂಬ

ಪದ ಬಳಕೆಯಲ್ಲಿತ್ತು. ಈಗ ಅದು ನಡವಳಿಕೆಯ ಗಡಿಯಾಗಿ ಪರಿಣಮಿಸಿದೆ. ಮರ್ಯಾದೆ ಮೀರಬಾರದು ಎಂದಾಗ ನಡತೆಯ ಗಡಿ (ಗೌರವ) ಮೀರಬಾರದು ಎಂದು ಅರ್ಥವಾಗುತ್ತದೆ.

ಸಂಸ್ಕೃತದಲ್ಲಿ ಒಂದು ಅರ್ಥದಲ್ಲಿದ್ದು ಕನ್ನಡ ಭಾಷೆಗೆ ಬಂದ ಮೇಲೆ ಅರ್ಥ ಬದಲಾಯಿಸಿಕೊಂಡಂಥ ಕೆಲವು ಶಬ್ದಗಳ ಪಟ್ಟಿಯೊಂದನ್ನು ಮುಂದೆ ಕೊಟ್ಟಿದೆ.

ಸಂಸ್ಕೃತ ಪದ	ಮೊದಲಿದ್ದ ಅರ್ಥ	ಕನ್ನಡದಲ್ಲಿ ಅದಕ್ಕಿರುವ ಅರ್ಥ
ಭದ್ರ	ಮಂಗಳಕರ	ರಕ್ಷಿತ
ವರ್ತಮಾನ	ಈಗಿನ	ಸುದ್ದಿ
ಸಮಾಚಾರ	ಒಳ್ಳೆಯ ನಡವಳಿಕೆ	ಸುದ್ದಿ
ಅವಸರ	ಸಂದರ್ಭ, ಪ್ರಸಂಗ	ಗಡಿಬಿಡಿ
ಆಗ್ರಹ	ಹಠ	ಬಲಾತ್ಕಾರ
ಮರ್ಯಾದೆ	ಗಡಿ, ಮಿತಿ	ಗೌರವ
ಸಭ್ಯ	ಸಭೆಯಲ್ಲಿರುವವನು	ಯೋಗ್ಯ, ಮರ್ಯಾದಸ್ಥ
ಸಭಿಕ	ಜೂಜುಗಾರ	ಸಭೆಯಲ್ಲಿರುವವನು
ವ್ಯವಹಾರ	ನ್ಯಾಯಾಲಯದ ವ್ಯವಹಾರ	ಕೊಟ್ಟು ತೆಗೆದುಕೊಳ್ಳುವ ವ್ಯವಹಾರ
ಅಪರೂಪ	ವಕ್ರರೂಪ	ಒಮ್ಮೊಮ್ಮೆ ಮಾತ್ರ ಕಾಣಿಸಿಕೊಳ್ಳುವುದು
ಲೋಭ	ದುರಾಸೆ	ಪ್ರೀತಿ (ಧಾರವಾಡದ ಕಡೆ)
ವಿಶ್ವಾಸ	ನಂಬಿಕೆ	ಪ್ರೀತಿ
ವಿಪರೀತ	ವ್ಯತ್ಯಾಸ	ಬಹಳ ಹೆಚ್ಚು
ಶಿಕ್ಷೆ	ಕಲಿಕೆ, ವಿದ್ಯೆ	ದಂಡನೆ
ಯೋಚನೆ	ಚಿಂತೆ	ಆಲೋಚನೆ
ನಿಜ	ತನ್ನ, ಸ್ವಂತದ	ಸತ್ಯ
ಆತುರ	ಪೀಡಿತ (ಆಶಾತುರ : ಆಸೆಯಿಂದ ಪೀಡಿತ)	ಅವಸರ
ಸರಾಗ	ರಾಗಸಹಿತ	ನಿರಾಯಾಸ

ಸಂಸ್ಕೃತ ಭಾಷೆಯಿಂದ ಕನ್ನಡ ಭಾಷೆಗೆ ಬೇಕಾದಷ್ಟು ಶಬ್ದಗಳು ಬಂದಿವೆ. ಅವುಗಳನ್ನು ತತ್ಸಮ ಎನ್ನುತ್ತೇವೆ. ಸಂಸ್ಕೃತ ಶಬ್ದಗಳಿಂದಲೇ ಹುಟ್ಟಿದ ಕೆಲವು ಪದಗಳೂ ಇವೆ. ಅವುಗಳನ್ನು ತದ್ಭವ ಎನ್ನುತ್ತೇವೆ. ಬ್ರಹ್ಮ, ಯಜ್ಞ, ರಾಶಿ, ಯಾತ್ರೆ – ಇವು ತತ್ಸಮಗಳು. ಬೊಮ್ಮ, ಜನ್ನ, ರಾಸಿ, ಜಾತ್ರೆ – ಇವು ತದ್ಭವಗಳು. ಒಂದು ಸಂಸ್ಕೃತ ಪದ ಮತ್ತು ಅದರಿಂದಲೇ ಹುಟ್ಟಿದ ತದ್ಭವ- ಈ ಎರಡೂ ಕನ್ನಡದಲ್ಲಿ ಬಳಕೆಯಲ್ಲಿರುವುದುಂಟು. ಅವೆರಡೂ ಒಂದೇ ಅರ್ಥ ಇರುವ ಪದಗಳಾದರೂ ಕೆಲವು ಸಲ ತತ್ಸಮಕ್ಕೆ ಒಂದು ಅರ್ಥ, ತದ್ಭವಕ್ಕೆ ಇನ್ನೊಂದು ಅರ್ಥ ಇರಬಹುದು. ತತ್ಸಮದ ಅರ್ಥ ಉತ್ತಮವಾದುದಾಗಿದ್ದು, ತದ್ಭವದ ಅರ್ಥ ಅದಕ್ಕಿಂತ ಕಡಮೆ ನೆಲೆಯದೂ ಆಗಿರಬಹುದು. ಉದಾಹರಣೆಗೆ 'ಯೋಗಿ' ಎಂಬ ಪದ ತೆಗೆದುಕೊಳ್ಳಿ. ಯೋಗಿ ದೊಡ್ಡ ಸಾಧು: ಸಮಾಜದ ಗೌರವಕ್ಕೆ ಪಾತ್ರನಾದವನು. ಆದರೆ 'ಯೋಗಿ' ಎಂಬ ಶಬ್ದದಿಂದಲೇ ಹುಟ್ಟಿದ 'ಜೋಗಿ' ಎಂಬ ತದ್ಭವಕ್ಕೆ 'ಭಿಕ್ಷುಕ' ಎಂಬ ಅರ್ಥ ಬಂದುಬಿಟ್ಟಿದೆ. ಅವನನ್ನು ಯಾರೂ ಕೇಳುವವರೇ ಇಲ್ಲ. ದೈವ ಎಂಬ ಪದ ತತ್ಸಮ. ಅದು ದೇವರನ್ನು ಸೂಚಿಸುತ್ತದೆ. ಆ 'ದೈವ' ಶಬ್ದಕ್ಕೇ ಹುಟ್ಟಿದ ದೆವ್ವ ಎಂಬ ತದ್ಭವದ ಅರ್ಥ ಏನೆಂದು ನೀವೇ ಬಲ್ಲಿರಿ. ಚಾಮುಂಡಿ ಬಹಳ ಪ್ರಸಿದ್ಧಳಾದ ದೇವತೆ. ಎಲ್ಲ ದೇವತೆಗಳಿಂದಲೂ ಪೂಜೆಗೊಂಡವಳು. ಮೈಸೂರಿನ ರಾಜಮನೆತನದ ಕುಲದೇವತೆ. ಆ ಚಾಮುಂಡಿ ಪದದಿಂದಲೇ ಬಂದ 'ಚೌಡಿ' ಹಳ್ಳಿಗಳಲ್ಲಿ ಸಾಮಾನ್ಯ ಜನರಿಂದ ಪೂಜೆ ಪಡೆಯುವ ಒಬ್ಬ ಕ್ಷುದ್ರದೇವತೆಯ ಹೆಸರು! ಕೆಳಗೆ ಕೆಲವು ತತ್ಸಮ ಪದಗಳ ಅರ್ಥವನ್ನೂ ತದ್ಭವ ಪದಗಳ ಅರ್ಥವನ್ನೂ ಜೊತೆಯಲ್ಲಿಯೇ ಕೊಟ್ಟಿದೆ. ಅವುಗಳನ್ನು ಲಕ್ಷ್ಯಗೊಟ್ಟು ಗಮನಿಸಿ.

ತತ್ಸಮ	ಅರ್ಥ	ತದ್ಭವ	ಅರ್ಥ
ತಾಂಬೂಲ	ಎಲೆ ಅಡಿಕೆ	ತಂಬುಲ	ಎಂಜಲು
ಪರಿಷತ್	ವಿದ್ಯಾಸಂಸ್ಥೆ (academy)	ಪರ್ಸೆ	ಗುಂಪು
ವೀರ	ಪರಾಕ್ರಮಿ	ಬೀರ	ಒಬ್ಬ ಕ್ಷುದ್ರವ್ಯಕ್ತಿ
ವಿರಾಗಿ	ರಾಗ ಲೋಭಗಳಿಲ್ಲದವನು	ಬೈರಾಗಿ	ಭಿಕ್ಷೆ ಬೇಡುವ ಬಾವಾ

ತತ್ಸಮ	ಅರ್ಥ	ತದ್ಭವ	ಅರ್ಥ
ಸಂಸ್ಥೆ	ಅನೇಕ ಜನ ಕೂಡಿ ಕೆಲಸ ಮಾಡುವ ವ್ಯವಸ್ಥಿತ ಸಂಸ್ಥೆ	ಸಂತೆ	ಜನಸಂದಣಿ ಇರುವ ಪೇಟೆ
ಯಾತ್ರೆ	ತೀರ್ಥಯಾತ್ರೆ	ಜಾತ್ರೆ	ಜನಜಂಗುಳಿ
ಶಿಲ್ಪಿ	ಕಲ್ಲಿನಲ್ಲಿ ಕಟ್ಟಡ ವಿಗ್ರಹಗಳನ್ನು ಕೊರೆಯುವ ಕಲಾವಿದ	ಚಿಪ್ಪಿಗ	ದರ್ಜಿ
ಚಾಮುಂಡಿ	ಶ್ರೇಷ್ಠ ದೇವತೆ	ಚೌಡಿ	ಕ್ಷುದ್ರ ದೇವತೆ
ಬ್ರಹ್ಮ	ತ್ರಿಮೂರ್ತಿಗಳಲ್ಲಿ ಒಬ್ಬ	ಬರಮ	ಕ್ಷುದ್ರ ದೇವತೆ
ದೈವ	ದೇವರು	ದೆವ್ವ	ಭೂತ, ಪ್ರೇತ ಇತ್ಯಾದಿ
ಪ್ರಕರಣ	ಅಧ್ಯಾಯ	ಹಗರಣ	ರಂಪ

ಮೇಲೆ ತೋರಿಸಿರುವ ಸಂಸ್ಕೃತ (ತತ್ಸಮ) ಪದಗಳಿಗೆ ಒಂದು ಅರ್ಥವೂ ಅವುಗಳಿಂದಲೇ ಬಂದ ತದ್ಭವ ಪದಗಳಿಗೆ ಇನ್ನೊಂದು ಅರ್ಥವೂ ಇದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಂಸ್ಕೃತ ಪದ ಉತ್ತಮವಾದ ಅರ್ಥವನ್ನೂ ತದ್ಭವ ಅಷ್ಟು ಉತ್ತಮವಲ್ಲದ್ದನ್ನೂ ಸೂಚಿಸುತ್ತಿವೆ. ಇದಕ್ಕೆ ಕಾರಣ ಇಷ್ಟೆ. ಸಂಸ್ಕೃತವನ್ನು ನಾವು ಮೊದಲಿನಿಂದಲೂ ದೇವಭಾಷೆಯೆಂದು ಕರೆದು ಅದನ್ನು ಹೆಚ್ಚು ಗೌರವದಿಂದ ಕಂಡಿದ್ದೇವೆ. ಹಿಂದಿನ ಕಾಲದಲ್ಲಿ ಸಂಸ್ಕೃತ ಕಲಿತವನನ್ನು ದೊಡ್ಡ ವಿದ್ಯಾವಂತನೆಂದು ಭಾವಿಸುತ್ತಿದ್ದರು. ಸಂಸ್ಕೃತ ಮೊದಲು, ಕನ್ನಡ ಅನಂತರ ಎಂಬ ಭಾವನೆ ನಮ್ಮಲ್ಲಿತ್ತು. ಆದ್ದರಿಂದ ಮೇಲೆ ತೋರಿಸಿದ ಸಂದರ್ಭಗಳಲ್ಲಿ ಉತ್ತಮವಾದದ್ದನ್ನು ಸೂಚಿಸಲು ಸಂಸ್ಕೃತವನ್ನೂ ಅದಕ್ಕಿಂತ ಕಡಿಮೆಯಾದದ್ದನ್ನು ಸೂಚಿಸಲು ತದ್ಭವವನ್ನೂ ಜನ ಬಳಸಿದರು.

ಪದಗಳ ಅರ್ಥ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುವುದುಂಟು ಎಂದು ತಿಳಿದೆವಷ್ಟೆ. ಈ ವ್ಯತ್ಯಾಸ ಯಾವ ಯಾವ ಬಗೆಯಲ್ಲಿ ನಡೆಯುತ್ತದೆ ಎಂದು ನೋಡಬಹುದು.

ಅರ್ಥ ಸಂಕೋಚ

ತುಂಬ ವ್ಯಾಪಕವಾದ ಅರ್ಥ ಪಡೆದಿರುವ ಒಂದು ಪದಕ್ಕೆ ಮುಂದೆ

ಬಹಳ ಮಿತವಾದ ಅರ್ಥ ಬಂದುಬಿಡುವುದು. ಇದನ್ನು ಅರ್ಥಸಂಕೋಚನ ಎಂದು ಕರೆಯಬಹುದು.

ಇಂಗ್ಲಿಷಿನ Deer ಎಂಬ ಶಬ್ದದ ಮೊದಲಿನ ಅರ್ಥ 'ಮೃಗ' ಎಂದು. ಅದು ಕಾಡಿನ ಯಾವ ಪ್ರಾಣಿ ಬೇಕಾದರೂ ಆಗಬಹುದಿತ್ತು. ಮುಂದೆ ಅದು ಜಿಂಕೆ ಎಂಬ ಅರ್ಥಕ್ಕೆ ತಿರುಗಿ ಒಂದೇ ಒಂದು ಪ್ರಾಣಿ ವರ್ಗಕ್ಕೆ ಅನ್ವಯಿಸುವ ಪದವಾಗಿಹೋಯಿತು. ಇಂಗ್ಲಿಷಿನದೇ ಆದ Hooligan ಎಂಬ ಪದ ನಿಮಗೆ ಗೊತ್ತಷ್ಟೆ? ಹಾಗೆಂದರೆ ಗೂಂಡಾ (ಗಲಾಟೆ ಎಬ್ಬಿಸುವವನು). ಆದರೆ ಮೊದಲು ಅದು ಐರ್ಲೆಂಡಿನ ಒಂದು ಪ್ರಸಿದ್ಧ ಮನೆತನದ ಹೆಸರಾಗಿತ್ತು. ಆ ಮನೆತನದವರು ದೇಶದ ರಾಜಕಾರಣದಲ್ಲಿ ಬಹಳ ಗಲಾಟೆ ಎಬ್ಬಿಸಿದವರಾದುದರಿಂದ ಗಲಾಟೆಕೋರರ ಎಂಬ ಅರ್ಥ ಆ ಪದಕ್ಕೆ ಬಂದುಹೋಯಿತು. ಈಗ ಇಂಗ್ಲಿಷಿನ Hooligan ಯಾವನೇ ಪುಂಡನಿಗೆ ಅನ್ವಯವಾಗುತ್ತದೆ!

ಸಂಸ್ಕೃತದಲ್ಲಿ ಸಂಧ್ಯಾ ಎಂಬ ಪದವಿದೆ ತಾನೆ? ಕತ್ತಲು ಹೋಗಿ ಬೆಳಕು ಹರಿಯುವ ಸಂಧಿಕಾಲ ಮತ್ತು ಬೆಳಕು ಹೋಗಿ ಕತ್ತಲು ಬರುವ ಸಂಧಿಕಾಲ–ಎರಡಕ್ಕೂ ಈ ಸಂಧ್ಯಾ ಎಂಬ ಪದ ಹಿಂದೆ ಅನ್ವಯವಾಗುತ್ತಿತ್ತು. ಈಗ ನಮ್ಮಲ್ಲಿ ಸಂಧ್ಯೆ ಎಂದರೆ ಸಂಜೆ ಎಂಬ ಅರ್ಥ ಮಾತ್ರವೇ ಇದೆ. ಸಂಜೆ ಎಂಬ ಪದ ಸಹ 'ಸಂಧ್ಯಾ'ದಿಂದ ಹುಟ್ಟಿದ ಪದವೇ!

ಮೇಲೆ ಹೇಳಿದುದು ಇಂಗ್ಲಿಷ್, ಸಂಸ್ಕೃತ ಪದಗಳ ಮಾತಾಯಿತು. ಕನ್ನಡದಲ್ಲಿಯೂ ಹೀಗೆ ಮಿತವಾದ ಅರ್ಥಕ್ಕೆ ಇಳಿದುಬಿಟ್ಟ ಶಬ್ದಗಳು ಬೇಕಾದಷ್ಟಿವೆ. 'ತೊತ್ತು' ಎಂದರೆ ಹಿಂದೆ ಸೇವೆ ಮಾಡುವ ವ್ಯಕ್ತಿ ಎಂಬ ಅರ್ಥ ಮಾತ್ರ ಇತ್ತು. ಆ ವ್ಯಕ್ತಿ ಗಂಡಸು ಅಥವಾ ಹೆಂಗಸು ಇಬ್ಬರಲ್ಲಿ ಯಾರು ಬೇಕಾದರೂ ಆಗಿರಬಹುದಾಗಿತ್ತು. ಉದಾಹರಣೆಗೆ ಬಸವಣ್ಣನವರು ತಮ್ಮ ವಚನವೊಂದರಲ್ಲಿ 'ನಿಮ್ಮ ತೊತ್ತಿನ ತೊತ್ತಯ್ಯ' ಎಂದು ತಮ್ಮನ್ನು ಕರೆದುಕೊಳ್ಳುತ್ತಾರೆ. ಈ ಮಾತಿಗೆ ನಿಮ್ಮ ಸೇವಕರ ಸೇವಕ ಎಂದು ಅರ್ಥ. ಈಗ ತೊತ್ತು ಎಂದರೆ ದಾಸಿ ಅಷ್ಟೆ. ದಾಸ ಅಥವಾ ಸೇವಕನನ್ನು ಯಾರೂ ತೊತ್ತು ಎನ್ನುವುದಿಲ್ಲ.

ಕುಪ್ಪಸದ ಮೂಲಾರ್ಥ 'ಕವಚ' ಎಂದು. ಅದು ಗಂಡು ಹೆಣ್ಣು ಯಾರು ಬೇಕಾದರೂ ಎದೆ ಭಾಗದಲ್ಲಿ ತೊಡುವ ವಸ್ತ್ರವಾಗಿತ್ತು. ಯೋಧರು ತೊಡುವ ಕವಚಕ್ಕೂ ಕುಪ್ಪಸ ಎಂದೇ ಹೆಸರಿತ್ತು. ಬರಬರುತ್ತ ಅದು ಸ್ತ್ರೀಯರು ಮಾತ್ರ ಧರಿಸುವ ಒಂದು ತೊಡುಗೆ ಆಗಿಹೋಯಿತು.

ಸೀರೆ ಎಂಬ ಶಬ್ದ ಬಂದದ್ದು ಚೀರ ಎಂಬ ಸಂಸ್ಕೃತದ ಪದದಿಂದ. ಚೀರ ಎಂದರೆ ವಸ್ತ್ರ. ಅದು ಪುರುಷರು ಸ್ತ್ರೀಯರು ಎನ್ನದೆ ಯಾರು ಬೇಕಾದರೂ ತೊಡಬಹುದಾದ ವಸ್ತ್ರವಾಗಿತ್ತು. ಒಂದು ಸಾವಿರ ವರ್ಷಗಳ ಹಿಂದೆ ರಚಿತವಾದ ವಡ್ಡಾರಾಧನೆ ಎಂಬ ಕನ್ನಡ ಗ್ರಂಥದಲ್ಲಿ ಒಂದು ಕಥೆ ಇದೆ. ಅದರಲ್ಲಿ ನಂದಿಮಿತ್ರ ಎಂಬುವನು ತನ್ನ ಒಡೆಯನಾದ ಕಾಷ್ಠಕೂಟನ ಹತ್ತಿರ ಬಂದು, "ಅಯ್ಯಾ ನನಗೆ ಉಡಲು ಏನೂ ಇಲ್ಲ. ಒಂದು ಸೀರೆಯನ್ನಾದರೂ ಕೊಡಿರಿ" ಎಂದು ಕೇಳುತ್ತಾನೆ !

ಪೊನ್ ಎಂಬ ಶಬ್ದ ನಿಮಗೆ ಪರಿಚಿತವಾದದ್ದೇ. ಅದರ ಮೂಲಾರ್ಥ 'ಲೋಹ' ಅಂತ, ಎಂದರೆ ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ–ಎಲ್ಲ ಬಗೆಯ ಲೋಹಕ್ಕೂ ಆ ಪದ ಬಳಕೆಯಾಗುತ್ತಿತ್ತು. ಈಗಲೂ ಕಬ್ಬಿಣ ಎಂಬ ಪದದಲ್ಲಿ ಆ ಪದ ಲೋಹ ಎಂಬ ಅರ್ಥದಲ್ಲಿಯೇ ಉಳಿದುಬಂದಿದೆ. ಕರ್+ಪೊನ್ (ಕರಿಯ ಲೋಹ), ಕರ್ಬೊನ್, ಕಬ್ಬುನ ಆಗಿ ಕಬ್ಬಿಣ ಎಂದಾಯಿತು. ಪೊನ್ ಪದವು ಲೋಹ ಎಂಬ ವಿಶಾಲವಾದ ಅರ್ಥವನ್ನು ಕಳೆದುಕೊಂಡು ಚಿನ ಎಂಬ ಅರ್ಥಕ್ಕೆ ಮಿತವಾಗಿ ಹೋಯಿತು. ಮುಂದೆ ಅದೇ 'ಹೊನ್ನು' ಆಗಿ ಚಿನ್ನದ ನಾಣ್ಯಕ್ಕೆ ಮಾತ್ರ ಅನ್ವಯವಾಗತೊಡಗಿ ಅದರ ಅರ್ಥ ಇನ್ನೂ ಸಂಕುಚಿತವಾಗಿ ಹೋಯಿತು.

ಕುರುಬ ಎನ್ನುವುದು ಮೊದಲು ಬೆಟ್ಟದ ಪ್ರಾಂತ್ಯದಲ್ಲಿ ವಾಸಮಾಡುವ ಎಲ್ಲ ಜನಕ್ಕೆ ಇದ್ದ ಹೆಸರು. ಕ್ರಮೇಣ ಅದು ಒಂದು ಜಾತಿಯ ಹೆಸರಾಗಿ ಬಿಟ್ಟಿತು. ಈಗ ನಗರದಲ್ಲೇ ವಾಸಮಾಡುವ ಜನರಲ್ಲೂ 'ಕುರುಬರು' ಇದ್ದಾರೆ.

ಹಿಂದೆ 'ಒಡೆಯ' ಎಂದರೆ ಉಳ್ಳವನು. ಒಬ್ಬ ವ್ಯಕ್ತಿಯ ಬಳಿ ಏನೇನು ಇರುತ್ತಿತ್ತೋ ಅದೆಲ್ಲ 'ಒಡವೆ' (ಉಳ್ಳದ್ದು) ಎನಿಸಿಕೊಳ್ಳುತ್ತಿತ್ತು. ಮುಂದೆ ಅದು ವ್ಯಕ್ತಿಯ ಆಸ್ತಿಪಾಸ್ತಿಗೆ ಬಳಕೆಯಾಗತೊಡಗಿ ಕ್ರಮೇಣ ಹೆಂಗಸರು ತೊಡುವ ಆಭರಣಗಳನ್ನು ಸೂಚಿಸುವ ಮಟ್ಟಕ್ಕೆ ಇಳಿದಿದೆ.

ಅರ್ಥ ವಿಸ್ತಾರ

ಇನ್ನು ಅರ್ಥವ್ಯತ್ಯಾಸದ ಇನ್ನೊಂದು ರೀತಿಯನ್ನು ನೋಡೋಣ. ಮೊದಲು ಮಿತವಾದ ಅರ್ಥದಿಂದ ಕೂಡಿದ್ದ ಪದಕ್ಕೆ ಕ್ರಮೇಣ ವಿಶಾಲವಾದ

ಅರ್ಥ ಬರುವುದು ಉಂಟೇನು ಒಂದೆ ಹೇಳಿತ್ತು. ಅದಕ್ಕೆ ಅರ್ಥವಿಸ್ತಾರ ಎನ್ನಬಹುದು.

Salary ಎಂಬ ಇಂಗ್ಲಿಷ್ ಪದದ ಮೂಲಾರ್ಥ ತಿಳಿದರೆ ನಿಮಗೆ ಆಶ್ಚರ್ಯವಾಗಬಹುದು. ಹಿಂದೆ ಕೆಲಸಗಾರರಿಗೆ ಉಪ್ಪಿನ ಖರ್ಚಿನ ಸಲುವಾಗಿ ಕೊಡುತ್ತಿದ್ದ ಪ್ರತ್ಯೇಕ ಭತ್ಯಕ್ಕೆ Salary ಎಂಬ ಹೆಸರಿತ್ತು. ಅದರಲ್ಲಿರುವ Salt ಎನ್ನುವುದನ್ನು ಸೂಚಿಸಲು ಬಳಕೆಯಾಗಿದ್ದ Sal ಎಂಬ ಪದಭಾಗ ಅದರಲ್ಲಿ ಈಗಲೂ ಇದೆ. ಮುಂದೆ Salary ಎಂದರೆ ಸಂಬಳ ಎಂದಾಗಿ ಬಿಟ್ಟಿತು. ಈಗ ಅದನ್ನು ಮೊದಲಿನ ಅರ್ಥದಲ್ಲಿ ಬಳಸುವುದಾದರೆ ತುಟ್ಟಿ ಭತ್ಯ, ಮನೆಭತ್ಯ, ಮೂಲ ಪಗಾರ ಎಲ್ಲ ಸೇರಿದ ಸಂಬಳ ಬರಿಯ ಉಪ್ಪಿನ ಖರ್ಚಿಗೆ ಪಡೆಯುವ ಹಣವೇ ಆಗಬೇಕಾದೀತು !

ಕೂಸು ಎಂದರೆ ಎಲ್ಲರಿಗೂ ಅರ್ಥವಾಗುವುದು 'ಮಗು' ಎಂದು ತಾನೆ? ಆದರೆ ಹಿಂದೆ ಪ್ರಾಯಕ್ಕೆ ಬಂದ ಹುಡುಗಿಗೂ ಕೂಸು ಎಂದು ಕರೆಯುತ್ತಿದ್ದುದುಂಟು ! 'ಕೊಡಗೂಸು' ಎಂಬ ಪದ ನೀವು ಕೇಳಿರಬೇಕು. ಇನ್ನೂ ವಿವಾಹವಾಗಿಲ್ಲದ ಹೆಣ್ಣಿಗೆ ಕೊಡಗೂಸು (ಬೇರೆಯವರಿಗೆ ವಿವಾಹಮಾಡಿ ಕೊಟ್ಟಿರದ ಕೂಸು) ಎಂದು ಕರೆಯುತ್ತಿದ್ದುದುಂಟು. ಈಗ ಹಾಗಲ್ಲ : ಕೂಸು ಎಂದರೆ ಮಗು. ಅದು ಹೆಣ್ಣೋ ಗಂಡೋ ಯಾವುದು ಬೇಕಾದರೂ ಆಗಬಹುದು. ಈಗ ಒಂದು ಮಗು ಗಂಡೋ ಹೆಣ್ಣೋ ಎಂದು ಸೂಚಿಸಲು ಗಂಡುಕೂಸು, ಹೆಣ್ಣುಕೂಸು ಎಂಬ ಪದಗಳನ್ನು ಬಳಸಬೇಕಾಗಿದೆ.

ಎಣ್ಣೆ (ಎಳ್ + ನೆಯ್) ಎಂದರೆ ಎಳ್ಳಿನ ಜಿಡ್ಡು ಎಂದು ಅರ್ಥ. ಈ ಪ್ರಕಾರ ಎಳ್ಳಿನದಲ್ಲದ ಯಾವ ಜಿಡ್ಡನ್ನೂ ಎಣ್ಣೆ ಎನ್ನಬಾರದು. ಆದರೆ ನಾವು ಕೊಬ್ಬರಿ ಎಣ್ಣೆ, ಹರಳೆಣ್ಣೆ, ಗಂಧದೆಣ್ಣೆ, ಇತ್ಯಾದಿ ಪದಗಳನ್ನು ಬಳಸುತ್ತಿದ್ದೇವೆ. ಹಿಂದಿನ ಅರ್ಥದ ಪ್ರಕಾರ ಕೊಬ್ಬರಿ ಎಣ್ಣೆ ಎಂದರೆ ಕೊಬ್ಬರಿ ಎಳ್ಳು + ಜಿಡ್ಡು ಎಂದಾಗಬೇಕು ! ಹೀಗೆ ಒಂದು ಕಾಲದಲ್ಲಿ ಎಳ್ಳಿನ ಜಿಡ್ಡಿಗೆ ಮಾತ್ರ ಬಳಕೆಯಾಗುತ್ತಿದ್ದ ಪದ ಈಗ ಕೊಬ್ಬರಿ, ಕಡಲೆಕಾಯಿ, ಹರಳು ಮೊದಲಾದ ಇತರ ಬೀಜಪದಾರ್ಥಗಳಿಂದ ತಯಾರಾಗುವ ಜಿಡ್ಡಿಗೂ ಅನ್ವಯವಾಗುತ್ತಿದೆ.

ಒಂದು ಕಾಲದಲ್ಲಿ ಒಬ್ಬ ವ್ಯಕ್ತಿಗೆ ಅಥವಾ ಪ್ರದೇಶಕ್ಕೆ ಅನ್ವಯ ವಾಗುತ್ತಿದ್ದ ಒಂದು ಹೆಸರನ್ನು ಈಗ ಅದೇ ರೀತಿಯ ಎಲ್ಲ ವ್ಯಕ್ತಿಗಳಿಗೆ

ಅಥವಾ ಪ್ರಸಂಗಗಳಿಗೆ ಬಳಸುವ ಪರಿಪಾಟಿ ಉಂಟು. ಇದೂ ಸಹ ಒಂದು ಪದದ ಅರ್ಥವಿಸ್ತಾರವಾಗುವ ಬಗೆಯನ್ನೇ ಹೋಲುತ್ತದೆ. ಬಕಾಸುರ ಮಹಾಭಾರತದಲ್ಲಿ ಬರುವ ಒಬ್ಬ ರಾಕ್ಷಸ. ಒಂದು ಬಂಡಿ ಆಹಾರ ನುಂಗುತ್ತಿದ್ದ ಅವನು ಹೊಟ್ಟೆಬಾಕತನಕ್ಕೆ ಹೆಸರಾದವನು. ಈಗಲೂ ನಮ್ಮಲ್ಲಿ ಯಾರಾದರೂ ಹೆಚ್ಚು ಊಟಮಾಡುವವರನ್ನು ಕುರಿತು "ಅವನು ಬಿಡೋ, ಬಕಾಸುರ" ಎಂದುಬಿಡುವುದುಂಟು. ಹಾಗೆಯೇ "ಅವಳ ಅತ್ತೆ ಶುದ್ಧ ತಾಟಕಿ" ಎಂಬ ಮಾತು ನೋಡಿ. ತಾಟಕಿ ರಾಮಾಯಣದಲ್ಲಿ ಬರುವ ಒಬ್ಬ ರಾಕ್ಷಸಿ; ಜನಕ್ಕೆ ತುಂಬ ಹಿಂಸೆ ಕೊಡುತ್ತಿದ್ದಳು. ಮತ್ತೊಬ್ಬರನ್ನು ಹುರಿದು ಮುಕ್ಕುವ ಸ್ತ್ರೀಯರನ್ನು ತಾಟಕಿ ಎನ್ನುವುದು ಈಗ ರೂಢಿ. ಇದೇ ರೀತಿ "ಶುದ್ಧ ನರಿ", "ಸಾಕ್ಷಾತ್ ಚಾಣಕ್ಯ", "ಅವನ ಮನೆಯಲ್ಲಿ ದಿನಾ ರಾಮಾಯಣ ಮಹಾಭಾರತ" ಇತ್ಯಾದಿ ಮಾತುಗಳನ್ನು ನೀವು ಕೇಳಿದ್ದೀರಿ.

ಹೀನಾರ್ಥಪ್ರಾಪ್ತಿ

ಒಂದು ಪದ ಮೊದಲು ಉತ್ತಮಾರ್ಥದಿಂದ ಕೂಡಿದ್ದು ಅನಂತರ ಹೀನಾರ್ಥ ಪಡೆದುಕೊಂಡು ಬಿಡುವುದುಂಟು. ಮದರಾಸಿನಲ್ಲಿ ಹಿಂದೆ ಹ್ಯಾಮಿಲ್ಟನ್ ಎಂಬ ಒಬ್ಬ ಪ್ರಸಿದ್ಧ ಇಂಜನಿಯರ್ ಇದ್ದರು. ಅವರು ಕಟ್ಟಿದ ಒಂದು ಸೇತುವೆಗೆ ಜನ ಅವರ ಹೆಸರನ್ನೇ ಇಟ್ಟು ಅದನ್ನು 'ಹ್ಯಾಮಿಲ್ಟನ್ ಬ್ರಿಡ್ಜ್' ಎಂದು ಕರೆದರು. ಆದರೆ ತಮಿಳು ಜನರಿಗೆ ಹ್ಯಾಮಿಲ್ಟನ್ ಎಂಬ ಪದದ ಉಚ್ಚಾರಣೆ ಕಷ್ಟಕರವಾದುದರಿಂದ ಕ್ರಮೇಣ ಅದು 'ಅಂಬಟ್ಟನ್ ಬ್ರಿಡ್ಜ್' ಆಯಿತು. ತಮಿಳಿನಲ್ಲಿ ಅಂಬಟ್ಟನ್ ಎಂದರೆ ಹಜಾಮ ಎಂದು ಅರ್ಥ ! ಆದ್ದರಿಂದ ಮುಂದೆ ಈ ಪದ ಇಂಗ್ಲಿಷಿನಲ್ಲಿ 'Barber's bridge' ಆಯಿತು ! ಹೀಗೆ ತಮಿಳರ ಉಚ್ಚಾರಣೆಗೆ ಸಿಕ್ಕಿ ಹ್ಯಾಮಿಲ್ಟನ್ ಸಾಹೇಬರು barber ಆದರು !

"ಹೊರಗಿನವನ ಎದುರು ಹಾಗೆ ಕೋರಿ ಉಟ್ಟು ಬರುತ್ತಾರೇನು ?" ಎಂದು ತಾಯಿ ಮಗಳನ್ನು ಗದರುವ ಮಾತು ನೀವು ಕೇಳಿರಬಹುದು. ಕೋರಿ ಎಂದರೆ ತೀರ ಸಾಮಾನ್ಯವಾದ, ಕೆಳಬೆಲೆಗೆ ದೊರೆಯುವ, ತುಂಬ ಬಡವರು ಉಡುವ ಸೀರೆ. ಇದು ಈಗಿನ ಅರ್ಥ. ಆದರೆ ಒಂದು ಕಾಲದಲ್ಲಿ ಅನುಕೂಲವಂತರೂ ಸಹ ಉಡಬಹುದಾದ ವಸ್ತ್ರವಾಗಿತ್ತು ಅದು. ಹಿಂದಿನಿಂದ ಬಂದ ಉಡುಗೊರೆ ಎಂಬ ಪದದಲ್ಲಿ ಇರುವ ಕೊರೆ (ಕೊಱೆ) ಎಂಬ ಪದ ಈ

ಕೋರಿಗೆ ಸಂಬಂಧಿಸಿದುದೇ ! ಉಡುವ ವಸ್ತ್ರಕ್ಕೆ ಉಡುಗೊರೆ ಎಂದು ಹೆಸರು. ಮರ್ಯಾದೆಯ ಕಾಣಿಕೆಯಾಗಿ ಕೊಡುವ ವಸ್ತ್ರದ ಹೆಸರಿನಲ್ಲಿ ಕೋರೆ ಎಂಬ ಶಬ್ದ ಇರುವುದೇ ಆ ಪದಕ್ಕೆ ಉತ್ತಮವಾದ ಅರ್ಥ ಇತ್ತು ಎಂಬುದನ್ನು ತೋರಿಸುತ್ತದೆ.

ದೇಗುಲ ಇಂಥದೇ ಇನ್ನೊಂದು ಪದ. ದೇವಕುಲ ಎಂಬ ಸಂಸ್ಕೃತ ಪದದ ತದ್ಭವ ಇದು. ದೇವಕುಲ ಎಂದರೆ ದೇವಾಲಯ. ದೇಗುಲ ಎಂದರೂ ಮುಂಚೆ ದೇವಾಲಯ ಎಂಬ ಅರ್ಥವೇ ಇತ್ತು. ಈಗ ಮಾತ್ರ, ದೇವರಿಲ್ಲದೆ ಹಾಳುಬಿದ್ದ ದೇವಸ್ಥಾನಕ್ಕೆ ಆ ಪದ ಬಳಕೆಯಾಗುತ್ತಿದೆ. ಉರ್ಜಿತ ಸ್ಥಿತಿಯಲ್ಲಿದ್ದ ದೇವಾಲಯವನ್ನು ಸೂಚಿಸುತ್ತಿದ್ದ ಪದ ಹಾಳುಗುಡಿ ಎಂಬ ಹೀನಾರ್ಥಕ್ಕೆ ಇಳಿದಿದೆ.

ಕೆಲಸ ಮಾಡುವವ (ಕೆಲಸಗಾರ)ನನ್ನು ಸೂಚಿಸುವ 'ಕೆಲಸಿಗ' ಎಂಬ ಒಂದು ಶಬ್ದ ಹಿಂದೆ ಇತ್ತು. ಗಾಣಿಗ, ಹಾವಾಡಿಗ, ಹೂವಾಡಿಗ ಎಂಬಂತೆ ಈ ಕೆಲಸಿಗ ಎಂಬ ಪದ. ಉತ್ತಮ ಕೆಲಸ, ಕೆಳದರ್ಜೆಯ ಕೆಲಸ ಎನ್ನದೆ ಎಲ್ಲ ಬಗೆಯ ಕೆಲಸ ಮಾಡುವವರನ್ನೂ ಕೆಲಸಿಗ ಎಂದು ಕರೆಯಬಹುದಾಗಿತ್ತು. ಈಗ ಕ್ಷೌರಿಕರನ್ನು ಮಾತ್ರ ಆ ಪದದಿಂದ ಕರೆಯುತ್ತಾರೆ. ಉಳಿದವರನ್ನು ಕೆಲಸಗಾರ ಎಂದು ಕರೆಯಬೇಕು. ಕೆಲಸಿಗ ಎಂದು ಕರೆದರೆ ಬೇರೆಯವರಿಗೆ ಕೋಪ ಬರಬಹುದು. ಆ ಮಟ್ಟಿಗೆ 'ಕೆಲಸಿಗ' ಪದ ಹೀನಾರ್ಥಕ್ಕೆ ಇಳಿದಿದೆ.

'ಹಾರುವ' ಎಂಬ ಶಬ್ದದ ಗತಿಯೂ ಇದೇ. ಅದು ಬಂದದ್ದು ಹಳಗನ್ನಡದ 'ಪಾರ್ವ'ದಿಂದ. ಪಾರ್ವ ಎಂದರೆ ಕಾಣಬಲ್ಲವನು. ಭವಿಷ್ಯವನ್ನು ಕಾಣಬಲ್ಲ ಜ್ಞಾನಿಗೆ, ಬ್ರಾಹ್ಮಣನಿಗೆ ಆ ಪದ ಅನ್ವಯವಾಗುತ್ತಿತ್ತು. ಸಮಾಜದಲ್ಲಿ ಬ್ರಾಹ್ಮಣನಿಗೆ ಎಂಥ ಉನ್ನತ ಸ್ಥಾನಮಾನ ಇತ್ತೆನ್ನುವುದೂ ಇದರಿಂದ ಗೊತ್ತಾಗುತ್ತದೆ. ಆದರೆ ಬರುಬರುತ್ತಾ ಅದು ತನ್ನ ಉತ್ತಮ ಅರ್ಥ ಕಳೆದುಕೊಂಡು ಕೀಳು ಅರ್ಥಕ್ಕೆ ಇಳಿಯಿತು; ಬ್ರಾಹ್ಮಣನನ್ನು ಗೇಲಿ ಮಾಡಲು ಬಳಸುವ ಶಬ್ದವಾಯಿತು. ಈಗ ಯಾರಾದರೂ ಹಾರುವ ಎಂದು ಕರೆದರೆ ಬ್ರಾಹ್ಮಣ ಸಿಟ್ಟಿಗೇಳುತ್ತಾನೆ !

ಅವ್ವ, ಅಮ್ಮ ಎಂಬ ಪದಗಳಿಗೆ ಸಮಾನಾರ್ಥಕವಾದ ಇನ್ನೊಂದು ಪದ 'ಅಬ್ಬೆ'. ತಾಯಿ ಎಂಬ ಅರ್ಥ ಕೊಡುವ ಈ ಪದ ಈಗ 'ಬೇ' ಎಂಬ

ಸಂಕ್ಷಿಪ್ತರೂಪಕ್ಕೆ ಇಳಿದು, ದಾವಣಗೆರೆಯ ಕಡೆ ಬಳಕೆಯಲ್ಲಿದೆ. ಕೆಳವರ್ಗದ ಸ್ತ್ರೀಯರನ್ನು ಉದ್ದೇಶಿಸುವಾಗ 'ಏನಬೇ' ಎಂದು ಹೇಳುತ್ತಾರೆ. ಅದಕ್ಕೆ ಈಗ ಮೊದಲಿನ ಅರ್ಥ ಇಲ್ಲ.

ಅಮ್ಮ ಎಂದರೆ ಮೈಸೂರಿನ ಕಡೆ ತಾಯಿ. ಆದರೆ ಧಾರವಾಡದ ಕಡೆ ಅದೇ ಪದಕ್ಕೆ ವಿಧವೆ ಎಂಬ ಅರ್ಥ ಇದೆ. ಸ್ವಾಮಿ ಎಂದರೆ ಮಠಾಧಿಪತಿಗಳಿಗೆ ಅನ್ವಯವಾಗುವ ಪದ. ಜೊತೆಗೆ Sir ಎಂಬ ಗೌರವ ಸೂಚಕ ಪದಕ್ಕೆ ಪ್ರತಿಯಾದ ಕನ್ನಡ ಪದ. ಆದರೆ ಧಾರವಾಡದ ಕಡೆ ಅದಕ್ಕೆ ಸನ್ಯಾಸಿ ಎಂಬ ಅರ್ಥವಿದೆ.

'ಗವಾರ' ಗ್ರಾಮದಿಂದ ಬಂದವನು ; ಹಳ್ಳಿಗ. ಅದಕ್ಕೆ ಕೆಟ್ಟ ಅರ್ಥ ವೇನೂ ಇರಲಿಲ್ಲ. ಆದರೆ ಈಗ ದಡ್ಡನನ್ನು ಮಾತ್ರ ಗವಾರ ಎನ್ನುತ್ತಾರೆ ! ಅನೇಕ ಗೋಪುಗಳನ್ನು ಕಟ್ಟಿದ ಶ್ರೀಮಂತನಿಗೆ ಗೋಸ್ವಾಮಿ ಎಂದು ಕರೆಯು ತ್ತಿದ್ದುದು ವಾಡಿಕೆ. ಈಗ ಅದೇ ಗೋಸ್ವಾಮಿ 'ಗೋಸಾವಿ'ಯಾಗಿ ಹೇಳುವ ಕೇಳುವರಿಲ್ಲದ ಸನ್ಯಾಸಿಯಾಗಿದ್ದಾನೆ.

ಉತ್ತಮಾರ್ಥಪ್ರಾಪ್ತಿ

ಕೆಲವು ಸಲ ಒಂದು ಪದಕ್ಕೆ ಇರುವ ಹೀನಾರ್ಥ ಹೋಗಿ ಉತ್ತಮಾರ್ಥ ಬರುವುದೂ ಉಂಟು. ಸೇವಕ ಎಂಬ ಅರ್ಥಕೊಡುತ್ತಿದ್ದ ಇಂಗ್ಲಿಷಿನ Knight ಎಂಬ ಪದ ಮುಂದೆ ರಾಜವಂಶದ ಅನುಗ್ರಹಕ್ಕೆ ಪಾತ್ರರಾದವರಿಗೆ ಸಿಗುವ Knigthood ಪ್ರಶಸ್ತಿಯಾಗಿ ಪರಿಣಮಿಸಿತು. ಸಾಯಿ ಎಂಬ ಅರ್ಥಕೊಡುವ ಹಳಗನ್ನಡದ 'ಪೊಂದು' ಎಂಬ ಪದ ಮುಂದೆ ಹೊಂದು, ಪಡೆ ಎಂಬ ಅರ್ಥಕ್ಕೆ ಏರಿತು. ತಮಿಳಿನ 'ಕಳಿಪ್ಪು' ಎಂಬ ಶಬ್ದ ಮೊದಲು ಕುಡಿಯುವುದರಿಂದ ಉಂಟಾಗುವ ಅಮಲಿನ ಸ್ಥಿತಿಯನ್ನು ಸೂಚಿಸುತ್ತಿತ್ತು. ಈಗ ಎಲ್ಲ ಬಗೆಯ ಆಮೋದವನ್ನೂ ಅದು ಹೇಳುತ್ತದೆ.

ಅರ್ಥಾಂತರ

ಅರ್ಥಾಂತರವೆಂದರೆ ಒಟ್ಟಿನಲ್ಲಿ ಒಂದು ಬಗೆಯ ಅರ್ಥದಿಂದ ಮತ್ತೊಂದು ಬಗೆಯ ಅರ್ಥಕ್ಕೆ ಹೊರಳುವುದು. ಸಂಸ್ಕೃತಿ ನಾಗರಿಕತೆಗಳ ಬೆಳವಣಿಗೆಗೆ ಇದರಿಂದ ತುಂಬ ಪ್ರಯೋಜನವಾಗಿದೆ. ಮನುಷ್ಯ ಸುಸಂಸ್ಕೃತನಾದಂತೆ ಅವನ ಮನಸ್ಸು ಸೂಕ್ಷ್ಮವಾಗುತ್ತದೆ ; ಹೊಸ ಹೊಸ ಸಂಗತಿಗಳು ಹೊಳೆಯು ತ್ತವೆ. ಅವುಗಳನ್ನೆಲ್ಲ ಹೇಳಲು ಅವನು ಹೊಸ ಪದಗಳನ್ನೇ ಸೃಷ್ಟಿಸುತ್ತಾನೆ

ಎನ್ನುವಂತಿಲ್ಲ. ಹಳೆಯ ಪದಗಳನ್ನೇ ಹೊಸದಾದ ಇನ್ನೊಂದು ಅರ್ಥಕ್ಕೆ ಬಳಸಿಕೊಳ್ಳಬಹುದು. ಇಂಗ್ಲಿಷಿನ Understand ಎಂಬ ಪದದ ಮೂಲಾರ್ಥ ಜನರ 'ನಡುವೆ ನಿಲ್ಲುವುದು'. ಹಾಗೆ ನಾಲ್ಕು ಜನರ ನಡುವೆ ಇದ್ದು ವ್ಯವಹರಿಸಿದರೆ ತಿಳಿವಳಿಕೆ ಬರುತ್ತದೆ; ಅವರ ಅಭಿಪ್ರಾಯ ತಿಳಿಯುತ್ತದೆ ಅಲ್ಲವೆ? ಆದರಿಂದಲೋ ಏನೋ ಆ ಪದಕ್ಕೆ 'ತಿಳಿದುಕೊ' ಎಂಬ ಅರ್ಥವೇ ಬಂದುಬಿಟ್ಟಿತು. ಹಾಗೆಯೇ ವಸ್ತುಗಳಿಗೆ ಬಳಸುವ ಮಾತನ್ನು ಭಾವಗಳಿಗೂ ಬಳಸುವುದುಂಟು. ಹರಿತವಾದ ಕತ್ತಿ, ಹರಿತವಾದ ಹಲ್ಲು—ಇತ್ಯಾದಿ ಕಡೆ ಬಳಕೆಯಾಗುತ್ತಿದ್ದ 'ಹರಿತ' ಎಂಬ ಶಬ್ದ ಕಣ್ಣಿಗೆ ಕಾಣದ್ದನ್ನು ಹೇಳಲೂ ಬಳಕೆಯಾಗಿ 'ಹರಿತವಾದ ಬುದ್ಧಿ' ಎಂಬ ಪ್ರಯೋಗ ಬಂತು. ಹೀಗೆಯೇ ದೊಡ್ಡ ಮನುಷ್ಯ, ಸಣ್ಣ ನಡತೆ, ತೂಕವಾದ ಮಾತು, ವಿಶಾಲವಾದ ಜ್ಞಾನ ಆಳವಾದ ಪಾಂಡಿತ್ಯ—ಇತ್ಯಾದಿ ಮಾತುಗಳು ಸಹ.

ಅರ್ಥಾಂತರದ ಇನ್ನೂ ಹಲವು ಬಗೆಗಳಿವೆ. ಅದರಲ್ಲಿ 'ಸೌಮ್ಯೋಕ್ತಿ' ಎಂಬ ಒಂದು ಬಗೆಯನ್ನು ಮಾತ್ರ ನೋಡೋಣ. ಕೆಲವರು 'ಹಾವು ಕಡಿಯಿತು' ಎನ್ನುವುದನ್ನು 'ಹುಳು ಮುಟ್ಟಿತು' ಎಂದು ಹೇಳುವುದುಂಟು. ಕಠಿನವಾದ ಸಂಗತಿಯನ್ನು ಸೌಮ್ಯಗೊಳಿಸಿ ನಯವಾಗಿ ಹೇಳುವ ಉದ್ದೇಶದಿಂದ ಇಂಥ ಮಾತು ಸೃಷ್ಟಿಯಾಗುತ್ತವೆ. ಹಾಗೆಯೇ ಕೆಲವರು ಅಮಂಗಳಕರವಾದದ್ದನ್ನು ಹೇಳಬಾರದೆಂಬ ಕಾರಣದಿಂದ ಏನು ನಡೆದಿರುತ್ತದೋ ಅದಕ್ಕೆ ವಿರೋಧವಾದದ್ದನ್ನು ಹೇಳುವುದುಂಟು. ಮನೆಯಲ್ಲಿ ಅರಿಶಿನ, ಕುಂಕುಮ ಖರ್ಚಾಗಿದೆ ಎಂದಿಟ್ಟುಕೊಳ್ಳಿ. ಅದನ್ನು ಅಂಗಡಿಯಿಂದ ತರಬೇಕಾಗಿದೆ. ಆಗ "ಮನೇಲಿ ಅರಿಶಿನ ಕುಂಕುಮ ಹೆಚ್ಚಿದೆ. ಬರುವಾಗ ತನ್ನಿ" ಎಂದು ಹೇಳುವುದುಂಟು. ಅರಿಶಿನ ಕುಂಕುಮಗಳು ಸೌಭಾಗ್ಯದ ಸಂಕೇತಗಳು. ಅವು ಮನೆಯಲ್ಲಿ ಇಲ್ಲ ಎನ್ನುವುದು ಅಮಂಗಳ. ಆದ್ದರಿಂದ ಅವು ಇಲ್ಲದಿರುವುದನ್ನೂ ಇದೆ ಎಂಬ ಮಾತಿನಿಂದಲೇ ಸೂಚಿಸುತ್ತಾರೆ! "ಬಳೆ ಹೆಚ್ಚಿವೆ, ತರಬೇಕು" ಎನ್ನುತ್ತಾರೆ. ಬಳೆ ಹೆಚ್ಚಾಗಿದ್ದರೆ ಮತ್ತೆ ಅದನ್ನು ಕೊಂಡು ತರುವುದು ಏಕೆ ಅನ್ನಿಸಬಹುದು. ವಾಸ್ತವವಾಗಿ ಬಳೆ ಒಡೆದಿರುತ್ತದೆ. ಆದರೆ ಬಳೆ ಒಡೆಯಿತು ಎನ್ನಬಾರದು. ಅದು ಅಮಂಗಳ. ಆದ್ದರಿಂದ ಬಳೆ ಹೆಚ್ಚಿತು ಎನ್ನುವುದು. ಹಾಗೆಯೇ ವಾರದಲ್ಲಿ ಅಮಂಗಳವಾದ ದಿನ ಎಂದು ಯಾವುದನ್ನು ತಿಳಿದಿದ್ದಾರೋ ಅದನ್ನು ಮಂಗಳವಾರ ಎಂದು ಕರೆಯುವ

ರೂಢಿ ಬಂದಿದೆ ! ಯಾರಾದರೂ ಹಿರಿಯರು ಸತ್ತಾಗ ಅವರು ಕೈಲಾಸವಾಸಿಗಳಾದರು ಎಂದೋ, ವೈಕುಂಠವಾಸಿಗಳಾದರು ಎಂದೋ ಅಥವಾ ಸ್ವರ್ಗಸ್ಥರಾದರು ಎಂದೋ ಹೇಳುವುದು ರೂಢಿ. ಮನಸ್ಸಿಗೆ ಕಠಿನವಾದ ಸಂಗತಿಗಳನ್ನು ನಯವಾಗಿ ಹೇಳುವ ವಾಡಿಕೆಯೇ ಇದಕ್ಕೆ ಕಾರಣ.

ಮೇಲೆ ಹೇಳಿದ್ದೆಲ್ಲ ಕನ್ನಡ ಪದಗಳ ಅರ್ಥ ವ್ಯತ್ಯಾಸದ ವಿಷಯವಾಯಿತು. ಇನ್ನು ನಮ್ಮ ಭಾಷೆಯ ಬೆಳವಣಿಗೆಯ ಬಗ್ಗೆ ಒಂದೆರಡು ಸಂಗತಿ ತಿಳಿಯೋಣ. ಕನ್ನಡ ಕಾಲದಿಂದ ಕಾಲಕ್ಕೆ ಬೆಳೆಯುತ್ತಲೇ ಬಂದಿದೆ. ಅದು ತನ್ನ ಸಂಪರ್ಕಕ್ಕೆ ಬಂದ ಇತರ ಭಾಷೆಗಳಿಂದ ಬೇಕಾದಷ್ಟು ಪದಗಳನ್ನು ತೆಗೆದುಕೊಂಡಿದೆ. ಇದೇನು ಹೊಸದಲ್ಲ. ಎಲ್ಲ ಭಾಷೆಗಳೂ ಹೀಗೆ ಅನ್ಯಭಾಷೆಗಳಿಂದ ಶಬ್ದಗಳನ್ನು ತೆಗೆದುಕೊಳ್ಳುವುದುಂಟು. ಪ್ರಸಿದ್ಧವಾದ ಇಂಗ್ಲಿಷ್ ಭಾಷೆ ಲ್ಯಾಟಿನ್ನಿನಿಂದ, ಗ್ರೀಕಿನಿಂದ ಫ್ರೆಂಚಿನಿಂದ ಬೇಕಾದಷ್ಟು ಪದಗಳನ್ನು ಸ್ವೀಕರಿಸಿದೆ. ಆದ್ದರಿಂದಲೇ ಅದು ಅಷ್ಟು ದೊಡ್ಡ ಭಾಷೆಯಾಗಿ ಬೆಳೆಯಿತು.

ಕನ್ನಡಕ್ಕೆ ಮೊದಲು ಸೇರಿದುದು ಸಂಸ್ಕೃತ ಪದಗಳು. ಕನ್ನಡ ದ್ರಾವಿಡರ ಭಾಷೆ ತಾನೆ ? ದ್ರಾವಿಡರಿಗೆ (ಸಂಸ್ಕೃತ ಮಾತನಾಡುತ್ತಿದ್ದ) ಆರ್ಯರ ಸಂಪರ್ಕ ಸಹಸ್ರವರ್ಷಗಳಿಗೂ ಹಿಂದೆಯೇ ಉಂಟಾಯಿತು. ಆರ್ಯರಿಂದ ಧರ್ಮ, ನೀತಿ, ಶಾಸ್ತ್ರ, ಸಮಾಜ, ಸಾಹಿತ್ಯ–ಇವುಗಳಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ನಾವು ಕಲಿತೆವು. ಆ ಸಂಗತಿಗಳ ಜೊತೆಗೇ ಅವುಗಳನ್ನು ವಿವರಿಸಲು ಬೇಕಾದ ಮಾತುಗಳನ್ನೂ ನಾವು ಅವರ ಭಾಷೆಯಿಂದಲೇ ಪಡೆದೆವು. ಆ ಸಂಸ್ಕೃತ ಪದಗಳು ನಮ್ಮ ಭಾಷೆಯಲ್ಲಿ ಬೆರೆತು ಕನ್ನಡವೇ ಆಗಿ ಹೋಗಿವೆ.

ದೈವ, ಧರ್ಮ, ಸತ್ಯ, ನ್ಯಾಯ, ನೀತಿ, ಪೂಜೆ, ನಮಸ್ಕಾರ, ತೀರ್ಥ, ಪ್ರಸಾದ, ವ್ರತ, ಉಪಚಾರ, ಶಿಕ್ಷೆ, ಕ್ಷಮೆ, ನೀಚ, ಅಲ್ಪ, ಶ್ರೇಷ್ಠ, ಶಕ್ತಿ, ಭಕ್ತಿ, ಗೌರವ, ವಿನಯ, ಬುದ್ಧಿ, ಭಾವ, ಪುಸ್ತಕ, ಕಾವ್ಯ, ನಾಟಕ, ಲೇಖನ, ಆಕಾಶ, ಭೂಮಿ, ಸೂರ್ಯ, ಚಂದ್ರ, ಉದಯ, ಅಸ್ತ, ಸಮುದ್ರ, ನದಿ, ಪ್ರದೇಶ, ದೇಶ, ರಾಷ್ಟ್ರ, ಧ್ವಜ, ಪ್ರಾರ್ಥನೆ, ಸೇವೆ–ಇವೆಲ್ಲ ಸಂಸ್ಕೃತ ಪದಗಳೇ. ಇವು ಮಾತ್ರವಲ್ಲದೆ ಇಂಥ ಸಂಸ್ಕೃತ ಪದಗಳಿಂದ ಹುಟ್ಟಿದ 'ತದ್ಭವ' ಪದಗಳೂ ನಮ್ಮಲ್ಲಿ ಹೇರಳವಾಗಿವೆ. ಸಂಸ್ಕೃತ ಪದವನ್ನು ತೆಗೆದುಕೊಳ್ಳುವಾಗ, ನಮ್ಮ ಉಚ್ಚಾರಣೆಗೆ ಅನುಕೂಲವಾಗುವಂತೆ ಅದನ್ನು ಕೊಂಚ

ಮಾರ್ಪಡಿಸಿದ್ದರೆ ಅದು ತದ್ಭವ ಅಷ್ಟೆ. ಗಾಜು, ಗಂಟು, ಬಾಣೆ, ಬಾವುಟ, ಬತ್ತಿ, ಸಿದ್ದೆ, ಅಣೆ, ಸಂತೆ, ಜಾತ್ರೆ, ನೊಗ, ಹಗ್ಗ, ಚಿತ್ರ, ಅಷ್ಟ—ಇವೆಲ್ಲ ತದ್ಭವಗಳು. ಇವು ಆರಂಭದಿಂದ ಕನ್ನಡದಲ್ಲಿಯೇ ಇದ್ದವು ಎನ್ನುವಷ್ಟು ಸಹಜ ಕನ್ನಡ ಪದಗಳಾಗಿ ಕಾಣುತ್ತವೆ.

ಅನೇಕ ಪರ್ಷಿಯನ್, ಅರಬ್ಬೀ ಮತ್ತು ಹಿಂದೂಸ್ಥಾನೀ ಪದಗಳೂ ಕನ್ನಡಕ್ಕೆ ಸೇರಿವೆ. ಸುಮಾರು ೧೩ನೆಯ ಶತಮಾನದಲ್ಲಿ ಮಹಮ್ಮದೀಯರು ಕರ್ನಾಟಕಕ್ಕೆ ಬಂದರು. ಕರ್ನಾಟಕದ ಕೆಲವು ಭಾಗಗಳನ್ನು ಮಹಮ್ಮದೀಯ ರಾಜರು ಸ್ವಲ್ಪಕಾಲ ಆಳಿದರು. ಆ ದಿನಗಳಲ್ಲಿ ಅವರು ಆಡುತ್ತಿದ್ದ ಪರ್ಷಿಯನ್ ಭಾಷೆಯೇ ರಾಜಭಾಷೆಯಾಗಿತ್ತು. ಆದ್ದರಿಂದ ಕನ್ನಡಕ್ಕೆ ಪರ್ಷಿಯನ್ ಭಾಷೆಯ ಪದಗಳೂ ಅನೇಕ ಅರಬ್ಬಿ ಭಾಷೆಯ ಪದಗಳೂ ಸೇರಿದುವು. ಸಂಸ್ಕೃತದ ಮೂಲಕ ಕೆಲವು ಹಿಂದೂಸ್ಥಾನೀ ಪದಗಳೂ ಬಂದವು. ಈ ಕೆಳಗಿನವು ಕೆಲವು ಪರ್ಷಿಯನ್ ಶಬ್ದಗಳು.

ಸಿಬ್ಬಂದಿ, ಕುಸ್ತಿ, ಗುಮಾಸ್ತೆ, ಕಿಮ್ಮತ್ತು, ಜವಾಬು, ಜಮೀನು, ದರ್ಬಾರ, ರಸ್ತೆ, ಸವಾರ, ಸರಕಾರ, ಸಿಪಾಯಿ, ದಿವಾನ, ಮೆಹನತ್ತು, ಪರದೆ, ಸಲೀಸು, ಖರೀದಿ, ಅಂಬಾರಿ, ಪರಿಷೆ, ಜೀನಸು, ಖಾಸಾ, ಶಿಫಾರಸ್ಸು, ಸರಬರಾಯಿ, ಖುದ್ದು, ಜಾದು, ಜಾಗ, ಸನದು—ಇತ್ಯಾದಿ.

ಇವುಗಳ ಜೊತೆ ಜೊತೆಗೇ ಬಂದ ಅರಾಬಿಕ್ ಶಬ್ದಗಳಲ್ಲಿ ಕೆಲವನ್ನು ಗಮನಿಸಿ.

ಅಮೀರ, ನಜರು, ನಾಜೂಕು, ಅಸಾಮಿ, ಇರಾದೆ, ಕಾಯಿದೆ, ಜಾಹೀರು, ತಾರೀಖು, ಇಸವಿ, ಗುಲಾಮ, ಜಮಾ, ಬಾಕಿ, ಬಾಬತ್ತು, ಶರಬತ್ತು, ವಕೀಲ, ಕಿಲ್ಲೆ, ಬಿಲ್‌ಕುಲ್, ದೌತಿ, ಮಂಜೂರು, ಸಲಾಮು, ದಾಖಲೆ, ದೌಲತ್ತು, ಮುನಸೀಫ್, ಗರೀಬ, ಹಾಜರಿ, ರಾಜಿ, ಧಿಮಾಕು—ಇತ್ಯಾದಿ.

ಈ ಕೆಳಗಿನವು ಹಿಂದೂಸ್ತಾನೀ ಶಬ್ದಗಳು.

ಅಂತಸ್ತು, ಅಂದಾಜು, ಅತ್ತರು, ಅರ್ಜಿ, ಕಮ್ಮಿ, ಕಂದಾಯ, ಕಾನೂನು, ಕಾರ್ಖಾನೆ, ದರ್ಬಾರು, ದಲ್ಲಾಳಿ, ಶಾಯಿ, ರಜಾ, ಸವಾರಿ, ಹಕ್ಕು, ಸಾಮಾನು, ರೈತ, ರೊಕ್ಕ, ಲಂಚ, ರುಜು, ಸರಕು, ಸರದಿ—ಇತ್ಯಾದಿ.

ಇಂಗ್ಲಿಷರು ನಮ್ಮ ದೇಶಕ್ಕೆ ಬಂದು ಕ್ರಮೇಣ, ಇಲ್ಲಿ ಪ್ರಬಲರಾಗಿ ನಮ್ಮ

ದೇಶವನ್ನು ಕೆಲವು ಕಾಲ ಆಳಿದರಷ್ಟೆ. ಆಗ ಆಡಳಿತ ಭಾಷೆ ಇಂಗ್ಲಿಷ್ ಆದದ್ದರಿಂದ ಸಾವಿರಾರು ಇಂಗ್ಲಿಷ್ ಪದಗಳು ಕನ್ನಡದಲ್ಲಿ ಸೇರಿಹೋದುವು. ಬ್ಲೇಡು, ಕಾಫಿ, ಕ್ಯಾಮೆರಾ, ನೋಟೀಸು, ಹೀರಂಗು, ಕೇಸು, ಕವರು, ಕಾರ್ಡ್, ಎಕರೆ, ಆಫೀಸು, ಕಾಲೇಜು, ಬಿಲ್, ಬೆಂಚು, ಬಲೂನು, ಚೆಕ್ಕು, ಬ್ಯಾಂಕು, ಷರಟು, ಸ್ಕೂಲು, ಸ್ಟೋರು, ಸ್ಕೋರು, ಮೇಸ್ತ್ರಿ, ಮೈಲಿ, ರಿಪೋರ್ಟ್, ಪೇಪರು, ರಬ್ಬರು, ಬ್ರೆಡ್ಡು, ಪೆನ್ನು, ಸೋಫಾ, ಸಿಲ್ಕು, ಸಿಮೆಂಟು, ಮೀಟರ್, ಪ್ಲೇಗು, ಟೇಬಲ್ಲು, ಜೈಲು, ಟಾನಿಕ್ಕು–ಇತ್ಯಾದಿ ಪದಗಳನ್ನು ಬಳಸದೆ ಮಾತನಾಡುವುದೇ ಕಷ್ಟ ಎನಿಸುವಷ್ಟರ ಮಟ್ಟಿಗೆ ಈ ಇಂಗ್ಲಿಷ್ ಪದಗಳು ಕನ್ನಡದ ಜೊತೆ ಬೆರೆತುಹೋಗಿವೆ. ಇಂಗ್ಲಿಷ್ ಪದಗಳನ್ನು ಸ್ವಲ್ಪ ತಿರುಚಿ ಅವುಗಳನ್ನು ಪೂರ್ತಿ ಕನ್ನಡೀಕರಿಸಿರುವುದೂ ಉಂಟು. Lantern ಎನ್ನುವ ಪದ ನಮ್ಮ ಲಾಟೀನು ಆಯಿತು. Fiddle ಎನ್ನುವುದನ್ನು ಪಿಟೀಲು ಎಂದು ಮಾಡಿಕೊಂಡೆವು. ಆಸ್ಪತ್ರೆ (Hospital), ಗಿಲೀಟು (Gilt), ಕಪ್ತಾನ (Captain), ಕಂತ್ರಾಟು (Contract)–ಇತ್ಯಾದಿ ಪದಗಳು ಇಂಗ್ಲಿಷ್ ಪದಗಳಿಂದ ಬಂದ ತದ್ಭವಗಳು ಎನ್ನಬಹುದು.

ಪೋರ್ಚುಗೀಸರು ಕರ್ನಾಟಕದ ಬದಿಯಲ್ಲಿಯೇ ಹಲವು ಕಾಲ ಇದ್ದು ಆಡಳಿತ ನಡೆಸಿದ್ದರಿಂದ ಹಲವು ಪೋರ್ಚುಗೀಸ್ ಪದಗಳೂ ನಮಗೆ ದಕ್ಕಿವೆ. ಪಗಾರ, ಬಿಸ್ಕತ್ತು, ಫಿರಂಗಿ, ಪಾದ್ರಿ, ಇಸ್ತ್ರಿ, ಬಟಾಟೆ; ಪಪ್ಪಾಯಿ, ಲಿಲಾವು (ಹರಾಜು) ಮೊದಲಾದುವು ಪೋರ್ಚುಗೀಸ್ ಪದಗಳು.

ಅನ್ಯಭಾಷೆಯ ಪದಗಳನ್ನು ನೇರವಾಗಿ ತೆಗೆದುಕೊಳ್ಳುವುದು, ಕೊಂಚ ಮಾರ್ಪಡಿಸಿ ಕನ್ನಡ ಮಾಡಿಕೊಳ್ಳುವುದು–ಇವುಗಳ ಜೊತೆಗೆ ಹೊಸಪದಗಳನ್ನೂ ಕನ್ನಡ ಭಾಷೆ ಸೃಷ್ಟಿಸಿಕೊಂಡಿದೆ. ಅವುಗಳಲ್ಲಿ ಎರಡು ಬಗೆಗಳಿವೆ.

ಮೊದಲನೆಯದು ಬೇರೆ ಭಾಷೆಯ ಕೆಲವು ಪದಗಳನ್ನು ಕನ್ನಡದಲ್ಲಿ ಅನುವಾದ ಮಾಡುವುದು. ಉದಾಹರಣೆಗಳನ್ನು ನೋಡಿ.


Blotting Paper : ಒತ್ತುಕಾಗದ
Ink-filler : ಮಸಿಪೂರಕ
Superman : ಅತಿಮಾನವ
Foreword : ಮುನ್ನುಡಿ
Short story : ಸಣ್ಣಕತೆ

Match box : ಕಡ್ಡಿಪೆಟ್ಟಿಗೆ
Tooth powder : ಹಲ್ಲುಪುಡಿ

ಮೇಲಿನದು ನೇರ ಅನುವಾದವಾಯಿತು. ಬೇರೆ ಭಾಷೆಯ ಪದಗಳು ಯಾವ ವಸ್ತುವನ್ನೊ ಸೂಚಿಸುತ್ತವೆಯಷ್ಟೆ. ಆ ವಸ್ತುವಿನ ಸ್ವರೂಪವನ್ನು ವರ್ಣಿಸುವಂಥ ಹೊಸ ಪದಗಳನ್ನು ಮಾಡಿಕೊಳ್ಳುವುದು ಇನ್ನೊಂದು ಬಗೆ.

Pin : ಗುಂಡುಸೂಜಿ
Train : ಹೊಗೆಬಂಡಿ
Radio : ಬಾನುಲಿ
Coal : ಕಲ್ಲಿದ್ದಲು
Socks : ಕಾಲುಚೀಲ
Photograph : ಛಾಯಾಚಿತ್ರ

ಇಂಥ ಅನೇಕ ಬಗೆಯಲ್ಲಿ ಕನ್ನಡ ತನ್ನ ಶಬ್ದಕೋಶವನ್ನು ಬೆಳೆಸಿಕೊಳ್ಳುತ್ತಲೇ ಇದೆ. ಹತ್ತಾರು ನದಿಗಳ ನೀರನ್ನು ತೆಗೆದುಕೊಂಡೂ ಸಮುದ್ರ ತನ್ನ ಸ್ವರೂಪವನ್ನು ಕಾಪಾಡಿಕೊಳ್ಳುತ್ತದೆ. ಹಾಗೆಯೇ ನಾನಾ ಕಡೆಗಳಿಂದ ಶಬ್ದಗಳನ್ನು, ಸ್ವೀಕರಿಸುತ್ತ, ಇರುವ ಪದಗಳಿಂದಲೇ ಹೊಸ ಹೊಸದನ್ನು ಸೃಷ್ಟಿಸಿಕೊಳ್ಳುತ್ತ ಬೆಳೆಯುತ್ತಿರುವ ನಮ್ಮ ಭಾಷೆ ಸಹ ಅವುಗಳನ್ನೆಲ್ಲ ತನ್ನದಾಗಿಸಿಕೊಂಡು ತನ್ನ ಸ್ವರೂಪವನ್ನು ಕಾಪಾಡಿಕೊಂಡಿದೆ.


ಪ್ರಥಮ ವಿಶ್ವ ಕನ್ನಡ ಸಮ್ಮೇಳನ
1982
BLOSSOM
Ph. : 25320400
₹ 10